**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ–577 222**
**ಫೋನ್ ನಂ: (08182) 246161 / 246163**

---

# –: ಕಾರ್ಮಿಕ ಗುತ್ತಿಗೆ ಟೆಂಡರ್ :–

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಎರಡು ವರ್ಷದ ಅವಧಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಕರೆಯಲಾದ ಇ–ಟೆಂಡರ್.**

| | |
|---|---|
| **ತುಂಬಿದ ಟೆಂಡರ್‌ಗಳನ್ನು ಒಕ್ಕೂಟಕ್ಕೆ ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ, ವೇಳೆ** | **: 18-09-2017 ರ ಸಂಜೆ 4.00 ಗಂಟೆಯವರೆಗೆ** |

**ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ, ವೇಳೆ : 21-09-2017 ರ ಮಧ್ಯಾಹ್ನ 12.00 ಗಂಟೆಗೆ**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222**

---

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ತುಂಡು ಗುತ್ತಿಗೆ ಕೆಲಸಗಳನ್ನು ನಿರ್ವಹಿಸಲು ಕಾರ್ಮಿಕರನ್ನು ಒದಗಿಸುವ ಬಗ್ಗೆ.**

## -: ಟೆಂಡರ್ ಫಾರಂನೊಂದಿಗೆ ಲಗತ್ತಿಸಿದ ದಾಖಲೆಗಳು :-

**ಅನುಬಂಧ – ಎ : ಇ–ಟೆಂಡರ್ ಪ್ರಕಟಣೆ**

**ಅನುಬಂಧ – ಬಿ : ಟೆಕ್ನಿಕಲ್ ಟೆಂಡರ್ ಫಾರಂ ಭಾಗ – 1**

**ಬಿ–1 : ಸಲ್ಲಿಸಬೇಕಾದ ದಾಖಲಾತಿಗಳ ಚೆಕ್‌ಲಿಸ್ಟ್ (ದಾಖಲಾತಿಗಳನ್ನು ಲಗತ್ತಿಸುವುದು.)**

**ಅನುಬಂಧ – ಸಿ : ಟೆಂಡರ್‌ಗೆ ಸಂಬಂಧಿಸಿದ ನಿಬಂಧನೆಗಳು (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.)**

**ಅನುಬಂಧ – ಡಿ : ತುಂಡು ಗುತ್ತಿಗೆಯ ಆಧಾರದ ಮೇಲೆ ನಿರ್ವಹಿಸಬೇಕಾದ ಕೆಲಸದ ವಿವರಗಳು (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.)**

**ಅನುಬಂಧ – ಇ : ತುಂಡು ಗುತ್ತಿಗೆ ಮೇಲೆ ನಿರ್ವಹಿಸಬೇಕಾದ ಕೆಲಸಗಳ ಹಾಲಿ ಸರಾಸರಿ ಅಂದಾಜು ದಿನವಹಿ ಪ್ರಮಾಣದ ವಿವರಗಳು (ಗಮನಿಸಿದಕ್ಕೆ ಸಹಿ ಮಾಡಿ ಲಗತ್ತಿಸುವುದು.)**

**ಅನುಬಂಧ – ಎಫ್ : ಕಮರ್ಷಿಯಲ್ ಟೆಂಡರ್ ಫಾರಂ ಭಾಗ – 2 ಇ–ಟೆಂಡರ್‌ನಲ್ಲಿದ್ದಂತೆ**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಡೇರಿ ಹಾಗೂ ದಾವಣಗೆರೆ ಡೇರಿಗಳಲ್ಲಿನ ವರ್ಗೀಕೃತ ಕೆಲಸಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಟೆಂಡರ್‌ದಾರರು ಟೆಂಡರ್ ಸಲ್ಲಿಸಬಹುದಾಗಿದೆ.**

**[ಟಿಪ್ಪಣಿ: ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರು ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸುವ ಪ್ರಕಟಣೆಯಲ್ಲಿ ತಿಳಿಸಿರುವ ಕೆಲಸಗಳಿಗೆ ಸಂಬಂಧಿಸಿದಂತೆ ಹಾಲಿ ನಡೆಯುತ್ತಿರುವ ಕೆಲಸಗಳನ್ನು ಅಧಿಕಾರಿಗಳ ಅನುಮತಿ ಪಡೆದು ಕೆಲಸದ ವೇಳೆಯಲ್ಲಿ ಖುದ್ದಾಗಿ ಪರಿಶೀಲಿಸಬಹುದಾಗಿದೆ.]**

ಅನುಬಂಧ – ‘ ಎ ’

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**

**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222**

**ದೂರವಾಣಿ : (08182) 246161, 246163 E-mail: shimuladmn@gmail.com**

---

ಸಂಖ್ಯೆ.ಶಿದಾಚಿಸಹಾಒ/ಆಡಳಿತ–4/ತು.ಗು.ಟೆಂ/ **05 /2017-18** ದಿನಾಂಕ: **18-08-2017**

**–: ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಣೆಗೆ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ) :–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಗೆ ಒಳಪಡುವ ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿಗಳಲ್ಲಿ ಎರಡು ವರ್ಷದ ಅವಧಿಗೆ ಈ ಕೆಳಕಂಡ ವರ್ಗೀಕೃತ ತುಂಡು ಗುತ್ತಿಗೆ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ.

| | |
|---|---|
| A) | ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. (ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ: ಅಂದಾಜು 60) |
| B) | ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಡ್ಯಾಮೇಜ್ ಪ್ಯಾಕೇಟ್‌ಗಳನ್ನು ಸಾರ್ಟಿಂಗ್ ಮಾಡುವ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. (ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ: 22) |

ಟೆಂಡರ್‌ದಾರರು ಪಿ.ಎಫ್., ಇ.ಎಸ್.ಐ, ಸರಕು ಮತ್ತು ಸೇವಾ ತೆರಿಗೆ (GST), ಪ್ರೊಫೆಷನಲ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ನೋಂದಣಿದಾರರಾಗಿದ್ದು, ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಕಾಂಟ್ರಾಕ್ಟ್ ಲೇಬರ್ ಲೈಸೆನ್ಸ್ ಹೊಂದಿದವರಾಗಿರತಕ್ಕದ್ದು. ಅರ್ಹ ಗುತ್ತಿಗೆದಾರರು ಮೇಲೆ ತಿಳಿಸಿದ ವರ್ಗೀಕೃತವಾದ A ಅಥವಾ B ಕೆಲಸಗಳನ್ನು ಅಥವಾ ಎರಡೂ ಕೆಲಸಗಳನ್ನು ನಿರ್ವಹಿಸಲು 2 ಲಕೋಟೆ (ಟೆಕ್ನಿಕಲ್ ಟೆಂಡರ್ ಮತ್ತು ಕಮರ್ಷಿಯಲ್ ಟೆಂಡರ್) ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **18-09-2017** ರಂದು ಸಾಯಂಕಾಲ **4.00** ಗಂಟೆಯವರೆಗೆ.

2) ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **21-09-2017** ರ ಮಧ್ಯಾಹ್ನ **12.00** ಗಂಟೆಗೆ ಒಕ್ಕೂಟದ ಕೇಂದ್ರ ಕಚೇರಿ ಸಭಾಂಗಣದಲ್ಲಿ.

ಟೆಂಡರ್ ಸಂಬಂಧ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **http://eproc.karnataka.gov.in** ಹಾಗೂ ಒಕ್ಕೂಟದ ವೆಬ್‌ಸೈಟ್: **www.shimul.coop** ಗಳಲ್ಲಿ ಪಡೆಯಬಹುದಾಗಿದೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ – 'ಬಿ'

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ–577 222**

---

## –: ಟೆಕ್ನಿಕಲ್ ಟೆಂಡರ್ ಭಾಗ–1 :–

***ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಟೆಕ್ನಿಕಲ್ ಟೆಂಡರಿಗೆ ಸಂಬಂಧಿಸಿದಂತೆ ನಾನು / ನಾವು ಸಲ್ಲಿಸುತ್ತಿರುವ ವಿವರಗಳು ಈ ಕೆಳಕಂಡಂತಿವೆ.***

| | | |
|---|---|---|
| 1 | ಟೆಂಡರ್‌ದಾರರ ಸಂಸ್ಥೆಯ ಹೆಸರು | |
| 2 | ನೋಂದಾಯಿತ ಕಚೇರಿಯ ವಿಳಾಸ | |
| 3 | ಕಚೇರಿಯ ದೂರವಾಣಿ/ಮೊಬೈಲ್ ಸಂಖ್ಯೆ | |
| 4 | ಪಾಲುಗಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರರ ಹೆಸರು ಮತ್ತು ವಿಳಾಸಗಳು | |
| 5 | ಸಂಸ್ಥೆಯು ಸ್ಥಾಪನೆಯಾದ ವರ್ಷ | |
| 6 | ರೀಜನಲ್ ಪ್ರಾವಿಡೆಂಟ್ ಫಂಡ್ ಕಮೀಷನರ್ ರವರ ಕಚೇರಿಯಿಂದ ಸಂಸ್ಥೆಯು ಹೊಂದಿದ ಭವಿಷ್ಯ ನಿಧಿ ನೋಂದಣಿ ಸಂಖ್ಯೆ | i) ನೋಂದಣಿ ಸಂಖ್ಯೆ: ____________<br>ii) ನೋಂದಣಿ ದಿನಾಂಕ: ___________ |
| 7 | ನೌಕರರ ರಾಜ್ಯ ವಿಮಾ ನಿಗಮದಿಂದ (ESI) ಸಂಸ್ಥೆಯು ಹೊಂದಿದ ನೋಂದಣಿ ಸಂಖ್ಯೆ | i) ನೋಂದಣಿ ಸಂಖ್ಯೆ: ____________<br>ii) ನೋಂದಣಿ ದಿನಾಂಕ: ___________ |
| 8 | ಅಂಗಡಿ / ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅಡಿ ಕಾರ್ಮಿಕ ಇಲಾಖೆಯಿಂದ ಹೊಂದಿರುವ ನೋಂದಣಿ ಸಂಖ್ಯೆ (Form C ರಲ್ಲಿ) | i) ನೋಂದಣಿ ಸಂಖ್ಯೆ: ____________<br>ii) ನೋಂದಣಿ ದಿನಾಂಕ: ___________<br>iii) ನೋಂದಣಿಯು ಎಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.<br>ದಿನಾಂಕ: _____________ |
| 9 | ಸರಕು ಮತ್ತು ಸೇವಾ ತೆರಿಗೆ (GST) ನೋಂದಣಿ ಸಂಖ್ಯೆ ಮತ್ತು ದಿನಾಂಕ | |
| 10 | ಕಾಂಟ್ರಾಕ್ಟ್ ಲೇಬರ್ ಆಕ್ಟ್ ಪ್ರಕಾರ ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಲೈಸೆನ್ಸ್ ಹೊಂದಿದ ವಿವರ (Form VI ರಲ್ಲಿ) | i) ಲೈಸೆನ್ಸ್ ಸಂಖ್ಯೆ: ____________<br>ii) ಲೈಸೆನ್ಸ್ ಪಡೆದ ದಿನಾಂಕ: ___________<br>iii) ಲೈಸೆನ್ಸ್ ಪಡೆದ ಅವಧಿ _________ದಿನಾಂಕದಿಂದ __________ದವರೆಗೆ |
| 11 | Pan ಸಂಖ್ಯೆ ನಮೂದಿಸುವುದು ಹಾಗೂ ಛಾಯಾಪ್ರತಿ ಲಗತ್ತಿಸುವುದು. | |
| 12 | ಪ್ರೊಫೆಷನಲ್ ಟ್ಯಾಕ್ಸ್ ನೋಂದಣಿ ಸಂಖ್ಯೆ ಮತ್ತು ದಿನಾಂಕ | |

**13.** <u>ಅನುಭವ ಹೊಂದಿದ ವಿವರಗಳು</u> – ಈ ಕೆಳಗೆ ನಮೂದಿಸಿದ ಡೇರಿ / ಆಹಾರ ಉತ್ಪಾದನಾ ಘಟಕಗಳಲ್ಲಿ ಕಾರ್ಮಿಕ ಗುತ್ತಿಗೆ ಕೆಲಸಗಳನ್ನು ನಿರ್ವಹಿಸಿದ್ದು, ಅವುಗಳ ವಿವರಗಳು ಕೆಳಗೆ ನಮೂದಿಸಿರುವಂತೆ ಇರುತ್ತವೆ. ಈ ಬಗ್ಗೆ ಸದರಿ ಸಂಸ್ಥೆಗಳಿಂದ ಕೆಲಸ ತೃಪ್ತಿಕರವಾಗಿ ನಿರ್ವಹಿಸಿರುವ ಬಗ್ಗೆ ನೀಡಿರುವ ದಾಖಲೆ / ಪ್ರಮಾಣ ಪತ್ರಗಳನ್ನು ಲಗತ್ತಿಸಿರುತ್ತೇನೆ.

| ಕ್ರ. ಸಂ | ಕೆಲಸ ನಿರ್ವಹಿಸಿದ ಡೇರಿ / ಆಹಾರ ಉತ್ಪಾದನಾ ಘಟಕದ ಹೆಸರು | ಕೆಲಸ ನಿರ್ವಹಿಸಿದ ಅವಧಿ (ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಮೂದಿಸುವುದು) | ಸರಾಸರಿ ದಿನ ಒಂದಕ್ಕೆ ಒದಗಿಸಿದ ಕಾರ್ಮಿಕರ ಸಂಖ್ಯೆ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |
| 7 | | | |
| 8 | | | |

[ಸೂಚನೆ : ಹೆಚ್ಚಿನ ವಿವರಗಳಿದ್ದಲ್ಲಿ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಲಗತ್ತಿಸುವುದು.]

| 14 | ಈ ಟೆಂಡರಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಸಂವೇದಕರ ನಿಧಿ (EMD) ಮೊತ್ತದ ವಿವರಗಳು : | | | |
|---|---|---|---|---|
| | ವರ್ಗೀಕೃತ ತುಂಡು ಗುತ್ತಿಗೆ ಕೆಲಸಗಳು | ನಿಗದಿತ ಇ.ಎಂ.ಡಿ ಮೊತ್ತ ` | A ಅಥವಾ B ಕೆಲಸಗಳಲ್ಲಿ ಯಾವ ಕೆಲಸಕ್ಕೆ ಟೆಂಡರ್ ಸಲ್ಲಿಸಿದೆಯೋ ಆ ಕಾಲಂನಲ್ಲಿ (√ ) ಮಾರ್ಕ್ ಮಾಡುವುದು. | (√ ) ಮಾರ್ಕ್ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಪಾವತಿಸಿದ ಇ.ಎಂ.ಡಿ. ಮೊತ್ತ (` ಗಳಲ್ಲಿ) |
| A) | ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. | 50,000/- | | |
| B) | ಶಿವಮೊಗ್ಗ ಮತ್ತು ದಾವಣಗೆರೆ ಡೇರಿಯಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಡ್ಯಾಮೇಜ್ ಪ್ಯಾಕೇಟ್‌ಗಳನ್ನು ಸಾರ್ಟಿಂಗ್ ಮಾಡುವ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. | 20,000/- | | |

ಟೆಂಡರ್‌ಗೆ ಸಂಬಂಧಿಸಿದ ನಿಯಮಗಳಿಗೆ ಒಳಪಟ್ಟು ಈ ಟೆಕ್ನಿಕಲ್ ಟೆಂಡರ್ ಅನ್ನು ಸಲ್ಲಿಸುತ್ತಿದ್ದು, ಮೇಲೆ ತಿಳಿಸಿದ ವಿವರಗಳು ಸತ್ಯವಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ. ಸಂಬಂಧಿಸಿದ ದಾಖಲಾತಿಗಳ ಛಾಯಾಪ್ರತಿಗಳನ್ನು ಲಗತ್ತಿಸಿದ್ದು ಮುಂದೆ ಒಕ್ಕೂಟವು ಸೂಚಿಸಿದಾಗ ಮೂಲ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

ದಿನಾಂಕ: ಟೆಂಡರ್‌ದಾರರ ಸಹಿ ಮತ್ತು ಸೀಲು.

ಪೂರ್ಣ ಹೆಸರು :

**ಅನುಬಂಧ – ‘ ಬಿ–1’**

# ತಾಂತ್ರಿಕ ಟೆಂಡರ್ ತಪಶೀಲು ಪಟ್ಟಿ (Check list)

| ಕ್ರ.ಸಂ | ಲಗತ್ತಿಸಿದ ವಿವರಗಳು | ಸಂಬಂಧಿಸಿದಕ್ಕೆ (√ ) ಮಾರ್ಕ್ ಮಾಡುವುದು |
|---|---|---|
| 1 | ನಿಗದಿಪಡಿಸಿದ ಸಂವೇದಕರ ನಿಧಿ (EMD) ಯನ್ನು ಇ–ಟೆಂಡರ್ ಮೂಲಕ ಸಲ್ಲಿಸಿದೆಯೇ ? | ಹೌದು / ಇಲ್ಲ |
| 2 * | ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಸಂಸ್ಥೆಯನ್ನು ಕಾರ್ಮಿಕ ಇಲಾಖೆಯಿಂದ ನೋಂದಾಯಿಸಿದ ಬಗ್ಗೆ ಪಡೆದ ಚಾಲ್ತಿಯಲ್ಲಿರುವ ಪ್ರಮಾಣ ಪತ್ರದ ಪ್ರತಿ (ಫಾರಂ–ಸಿ) ಲಗತ್ತಿಸಿದೆಯೇ ? | ಹೌದು / ಇಲ್ಲ |
| 3 * | ಭವಿಷ್ಯ ನಿಧಿ (PF) ಕೋಡ್ ನಂಬರ್ ಮಂಜೂರು ಮಾಡಿದ ಭವಿಷ್ಯ ನಿಧಿ ಸಂಸ್ಥೆಯ ಪತ್ರದ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 4 * | ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್ ಮಂಜೂರು ಮಾಡಿದ ನೌಕರರ ರಾಜ್ಯ ವಿಮಾ ನಿಗಮದ ಪತ್ರದ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 5 | ತುಂಡು ಗುತ್ತಿಗೆಯ ಕೆಲಸಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಿದ ಸಂಸ್ಥೆಗಳ ವಿವರ ಮತ್ತು ಅವರಿಂದ ಪಡೆದ ದಾಖಲಾತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 6 * | ಸರಕು ಮತ್ತು ಸೇವಾ ತೆರಿಗೆ (GST) ನೋಂದಣಿ ಪತ್ರ ಲಗತ್ತಿಸಿದೆಯೇ ? | ಹೌದು / ಇಲ್ಲ |
| 7 * | ಕಾಂಟ್ರಾಕ್ಟ್ ಲೇಬರ್ ಆಕ್ಟ್ ಪ್ರಕಾರ ಕಾರ್ಮಿಕ ಇಲಾಖೆಯಿಂದ ಪಡೆದ ಲೇಬರ್ ಲೈಸೆನ್ಸ್ ಪ್ರತಿ (ಫಾರಂ–6) ಲಗತ್ತಿಸಿದೆಯೇ ? | ಹೌದು / ಇಲ್ಲ |
| 8 * | ಪ್ರೊಫೆಷನಲ್ ಟ್ಯಾಕ್ಸ್ ನೋಂದಣಿ ಪತ್ರ ಲಗತ್ತಿಸಿದೆಯೇ ? | ಹೌದು / ಇಲ್ಲ |
| 9* | Pan card ಛಾಯಾ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 10 | A ಮತ್ತು B ತುಂಡು ಗುತ್ತಿಗೆ ಕೆಲಸಗಳಿಗೆ ಡೇರಿ/ಆಹಾರ ಉತ್ಪಾದನಾ ಘಟಕಗಳಲ್ಲಿ ಕಾರ್ಮಿಕ ಗುತ್ತಿಗೆ ಕೆಲಸ ನಿರ್ವಹಿಸಿದಕ್ಕೆ ಅನುಭವ ಪತ್ರದ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 11* | 2015-16 ನೇ ಆರ್ಥಿಕ ಸಾಲಿನ (2016-17 ನೇ ಅಸೆಸ್‌ಮೆ0ಟ್ ಸಾಲಿನ) ಆದಾಯ ತೆರಿಗೆ ಸಲ್ಲಿಸಿರುವ ದಾಖಲೆ ಲಗತ್ತಿಸಿದೆಯೇ ? | ಹೌದು / ಇಲ್ಲ |
| 12 | ಅನುಬಂಧ ‘ ಸಿ ’’ರಲ್ಲಿಯ ಟೆಂಡರ್ ನಿಬಂಧನೆಗಳನ್ನು ಒಪ್ಪಿ ಸಹಿ ಮಾಡಿ ಲಗತ್ತಿಸಿದೆಯೇ ? | ಹೌದು / ಇಲ್ಲ |

ದಿನಾಂಕ: ಟೆಂಡರ್‌ದಾರರ ಸಹಿ ಮತ್ತು ಸೀಲು.

* ಮೇಲ್ಕಂಡ ಕ್ರಮ ಸಂಖ್ಯೆ: 2, 3, 4, 6, 7, 8, 9 ಮತ್ತು 11 ರ ದಾಖಲೆಗಳನ್ನು ನೋಟರಿಯವರಿಂದ ಪ್ರಮಾಣೀಕರಿಸಿ ಲಗತ್ತಿಸುವುದು.

ಅನುಬಂಧ - 'ಸಿ'

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ–577 222

---

## –: ಟೆಂಡರ್‌ಗೆ ಸಂಬಂಧಿಸಿದ ನಿಬಂಧನೆಗಳು :–

**(1) ಟೆಂಡರ್ ಸಲ್ಲಿಸುವ ವಿಧಾನ:–**

ಎ) ಟೆಕ್ನಿಕಲ್ ಟೆಂಡರ್ ಭಾಗ–1 ನ್ನು ತುಂಬಿ ಅದರೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಇ–ಟೆಂಡರ್ ಮೂಲಕ ಭರ್ತಿ ಮಾಡಿ ಸಲ್ಲಿಸುವುದು.

ಬಿ) ಕಮರ್ಷಿಯಲ್ ಟೆಂಡರ್ ಭಾಗ–2 ಅನ್ನು ಇ–ಟೆಂಡರ್ ಮೂಲಕ ಭರ್ತಿ ಮಾಡಿ ಸಲ್ಲಿಸುವುದು.

**(2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ :** ಇ–ಟೆಂಡರ್ ಪ್ರಕಟಣೆಯಲ್ಲಿದ್ದಂತೆ

**(3) ಟೆಂಡರ್ ಸಲ್ಲಿಸಲು ಅರ್ಹತೆ:**

ಎ) ಸಂವೇದಕರ ನಿಧಿ (EMD), ಕಾರ್ಮಿಕರ ಭವಿಷ್ಯನಿಧಿ (EPF), ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ರ ಪ್ರಕಾರ ಪಡೆದ ಪ್ರಮಾಣ ಪತ್ರ(ಫಾರಂ–ಸಿ), ಸರಕು ಮತ್ತು ಸೇವಾ ತೆರಿಗೆ (GST), ಪ್ರೊಫೆಷನಲ್ ಟ್ಯಾಕ್ಸ್ ಮತ್ತು ಇನ್‌ಕಂಟ್ಯಾಕ್ಸ್ ನೋಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಪಾನ್ ಕಾರ್ಡ್ ಹೊಂದಿರಬೇಕು.

ಬಿ) A ಮತ್ತು B ತುಂಡು ಗುತ್ತಿಗೆ ಕೆಲಸಗಳಿಗೆ ಡೇರಿ/ಆಹಾರ ಉತ್ಪಾದನಾ ಘಟಕಗಳಲ್ಲಿ ಕಾರ್ಮಿಕ ಗುತ್ತಿಗೆ ಕೆಲಸಗಳನ್ನು ನಿರ್ವಹಿಸಿದ ಅನುಭವ ಹೊಂದಿದವರಾಗಿರಬೇಕು.

ಸಿ) A ಮತ್ತು B ತುಂಡು ಗುತ್ತಿಗೆ ಕೆಲಸಗಳನ್ನು ನಿರ್ವಹಿಸಲು ಟೆಂಡರ್‌ದಾರರು ಕಾಂಟ್ರಾಕ್ಟ್ ಲೇಬರ್ ಲೈಸೆನ್ಸ್(ಫಾರಂ–6) ಹೊಂದಿದವರಾಗಿರಬೇಕು.

ಡಿ) ಒಕ್ಕೂಟದಲ್ಲಿ ಹಾಲಿ ಭದ್ರತಾ ಗುತ್ತಿಗೆ ಕೆಲಸವನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಸದರಿ ಕಾರ್ಮಿಕ ಗುತ್ತಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

ಇ) ಒಕ್ಕೂಟದಲ್ಲಿ ಕಾರ್ಮಿಕ ಗುತ್ತಿಗೆ ಕೆಲಸ / ಭದ್ರತಾ ಗುತ್ತಿಗೆ ಅಥವಾ ಒಕ್ಕೂಟದ ಇನ್ನಿತರೆ ಯಾವುದೇ ಗುತ್ತಿಗೆ ಕೆಲಸಗಳನ್ನು ಗುತ್ತಿಗೆ ಅವಧಿ / ನಿಯಮಾನುಸಾರ ವಿಸ್ತರಿಸಿದ ಅವಧಿ ಮುಗಿಯುವುದರ ಒಳಗಾಗಿ ಅವರ ಕೆಲಸ ಅಸಮರ್ಪಕವೆಂದು ಅವರ ಗುತ್ತಿಗೆಯನ್ನು ಈ ಹಿಂದೆ ಒಕ್ಕೂಟವು ರದ್ದುಪಡಿಸಿದ್ದಲ್ಲಿ ಅಂತಹ ಗುತ್ತಿಗೆದಾರರು ಅವರ ಗುತ್ತಿಗೆ ರದ್ದುಪಡಿಸಿದ ಆದೇಶದಿಂದ 5 ವರ್ಷಗಳ ಅವಧಿ ಪೂರ್ತಿ ಆಗದೇ ಇದ್ದಲ್ಲಿ ಅವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

ಎಫ್) ಈ ಹಿಂದೆ ಒಕ್ಕೂಟದಲ್ಲಿ ಗುತ್ತಿಗೆದಾರರು ಯಾವುದೇ ಗುತ್ತಿಗೆ ಸೇವೆ ಸಲ್ಲಿಸಿದ್ದು ಆಗ ಅವರ ಸೇವೆಯು ತೃಪ್ತಿಕರವಾಗಿಲ್ಲವೆಂದು ಪರಿಗಣಿಸಲ್ಪಟ್ಟಿದ್ದಲ್ಲಿ ಅಥವಾ ಅವರನ್ನು ಕಪ್ಪುಪಟ್ಟಿಯಲ್ಲಿ ಇರಿಸಿದ್ದಲ್ಲಿ ಅಂತಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. ಇದರ ಬಗ್ಗೆ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಜಿ) ಈ ಹಿಂದೆ ಒಕ್ಕೂಟದಲ್ಲಿ ಯಾವುದೇ ಕೆಲಸಗಳಿಗಾಗಿ ಟೆಂಡರ್ ಒಪ್ಪಿಗೆಯ ಆದೇಶ ಪಡೆದ ನಂತರ ನಿಗದಿತ ಕಾಲದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ಹಾಗೂ ಭದ್ರತಾ ಠೇವಣಿಯನ್ನು ನೀಡಲು ವಿಫಲರಾಗಿ ಸಂವೇದಕರ ನಿಧಿಯನ್ನು ಒಕ್ಕೂಟವು ಮುಟ್ಟುಗೋಲು ಹಾಕಿಕೊಂಡಂತಹ ಗುತ್ತಿಗೆದಾರರು ಅದರ ಮುಂದಿನ 5 ವರ್ಷಗಳ ಅವಧಿಗೆ ಒಕ್ಕೂಟದ ಯಾವುದೇ ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅರ್ಹರಿರುವುದಿಲ್ಲ.

**(4) ಗುತ್ತಿಗೆಯ ಅವಧಿ:**

ಗುತ್ತಿಗೆಯು ಎರಡು ವರ್ಷದ ಅವಧಿಯಾಗಿದ್ದು, ಗುತ್ತಿಗೆ ಅವಧಿ ಮುಗಿದ ಮೇಲೆ ಸದರಿ ಗುತ್ತಿಗೆಯನ್ನು 3 ತಿಂಗಳವರೆಗೆ ಅದೇ ದರ ಹಾಗೂ ಅದೇ ನಿಬಂಧನೆಗಳಲ್ಲಿ ಮುಂದುವರೆಸುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿರುತ್ತದೆ. ಗುತ್ತಿಗೆದಾರರ ಸೇವೆಯು ಸಮರ್ಪಕವಾಗಿಲ್ಲದಿದ್ದಲ್ಲಿ ಅವರ ಗುತ್ತಿಗೆಯನ್ನು ಒಕ್ಕೂಟವು ಯಾವುದೇ ಸಂದರ್ಭದಲ್ಲಿ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ.

**(5) ಟೆಂಡರ್‌ಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕು :**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಯಾವುದೇ ಟೆಂಡರ್ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಚೇರಿ ಕೆಲಸದ ಆದೇಶ ನೀಡುವ ಮೊದಲು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

**(6) ಸಂವೇದಕರ ನಿಧಿ (EMD):** ಇ–ಟೆಂಡರ್‌ನಲ್ಲಿದ್ದಂತೆ

ಎ) ಕಡಿಮೆ ದರ ನಮೂದಿಸಿದ ಗುತ್ತಿಗೆದಾರರ ಸಂವೇದಕರ ನಿಧಿಯನ್ನು 90 ದಿನ ಅಥವಾ ಟೆಂಡರ್ ಇತ್ಯರ್ಥವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಿಂದಿರುಗಿಸಲಾಗುವುದಿಲ್ಲ.

ಬಿ) ಟೆಂಡರ್ ಒಪ್ಪಿಗೆಯ ಆದೇಶ ನೀಡಿದ ನಂತರ ಗುತ್ತಿಗೆದಾರರು ನಿಗದಿತ ಕಾಲದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ಹಾಗೂ ಭದ್ರತಾ ಠೇವಣಿಯನ್ನು ನೀಡಲು ವಿಫಲರಾದಲ್ಲಿ ಸಂವೇದಕರ ನಿಧಿಯನ್ನು ಒಕ್ಕೂಟವು ಮುಟ್ಟುಗೋಲು ಹಾಕಿಕೊಳ್ಳುವುದು. ಈ ರೀತಿ ಸಂವೇದಕರ ನಿಧಿ ಮುಟ್ಟುಗೋಲು ಹಾಕಿಕೊಂಡ ಗುತ್ತಿಗೆದಾರರು ಮುಂದಿನ 5 ವರ್ಷಗಳ ಅವಧಿಗೆ ಒಕ್ಕೂಟದ ಯಾವುದೇ ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅರ್ಹರಿರುವುದಿಲ್ಲ.

**(7) ಭದ್ರತಾ ಠೇವಣಿ (ಸೆಕ್ಯೂರಿಟಿ ಡಿಪಾಜಿಟ್) :–**

ತುಂಡು ಗುತ್ತಿಗೆ ಒಪ್ಪಿಗೆ ಆದೇಶ ಪಡೆದ 8 ದಿನಗಳೊಳಗಾಗಿ ಗುತ್ತಿಗೆದಾರರು, ಕಾರ್ಯ ನಿರ್ವಹಣಾ ಭದ್ರತೆಗಾಗಿ ಈ ಕೆಳಕಂಡಂತೆ ವರ್ಗೀಕರಿಸಲಾದ ತುಂಡು ಗುತ್ತಿಗೆ ಕೆಲಸಗಳಿಗೆ ನಮೂದಿಸಿದ ಮೊಬಲಗನ್ನು ಸೆಕ್ಯೂರಿಟಿ ಡಿಪಾಸಿಟ್ ಆಗಿ ನಗದು ರೂಪದಲ್ಲಿ ಒಕ್ಕೂಟದಲ್ಲಿ ಇಡತಕ್ಕದ್ದು. ಇದಕ್ಕೆ ಬಡ್ಡಿ ನೀಡಲಾಗುವುದಿಲ್ಲ.

| ಕೆಲಸದ ವಿವರ | ನಿಗದಿತ ಭದ್ರತಾ ಠೇವಣಿ ಮೊತ್ತ (` ಗಳಲ್ಲಿ) |
|---|---|
| A) ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. (ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ: ಅಂದಾಜು 60) | **1,00,000/-** |

| | |
|---|---|
| **B)** ಶಿವಮೊಗ್ಗ ಮತ್ತು ದಾವಣಗೆರೆ ಡೇರಿಯಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಡ್ಯಾಮೇಜ್ ಪ್ಯಾಕೇಟ್‌ಗಳನ್ನು ಸಾರ್ಟಿಂಗ್ ಮಾಡುವ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು. (ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ: ಅಂದಾಜು 22) | **40,000/-** |

**(8)** ಭದ್ರತಾ ಠೇವಣಿಯ ಮೊತ್ತವನ್ನು (ಸೆಕ್ಯೂರಿಟಿ ಡಿಪಾಸಿಟ್) ಈ ಕೆಳಗಿನ ಸಂದರ್ಭದಲ್ಲಿ ಪೂರ್ಣ ಅಥವಾ ಭಾಗಶಃ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಅ) ತಿಳಿಸಿದ ಕೆಲಸಗಳನ್ನು ನಿರ್ವಹಿಸದಿದ್ದಾಗ ಅಥವಾ ಗುತ್ತಿಗೆಯ ನಿಬಂಧನೆಗಳ ಉಲ್ಲಂಘನೆಗಾಗಿ ಗುತ್ತಿಗೆಯನ್ನು ರದ್ದುಪಡಿಸಿದ ಸಂದರ್ಭದಲ್ಲಿ,

ಆ) ಗುತ್ತಿಗೆಯನ್ನು ನಿರ್ವಹಿಸದೇ ಇದ್ದುದಕ್ಕಾಗಿ ಒಕ್ಕೂಟಕ್ಕೆ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ,

ಇ) ಗುತ್ತಿಗೆದಾರರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಕೆಲಸಗಾರರು ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ಒಕ್ಕೂಟದ ಆಸ್ತಿಗೆ ಹಾನಿ ಉಂಟು ಮಾಡಿದಲ್ಲಿ,

ಈ) ಗುತ್ತಿಗೆದಾರನು ನಿಗದಿಪಡಿಸಿದ ತುಂಡು ಗುತ್ತಿಗೆ ಕೆಲಸಗಳಿಗೆ ನಿಗದಿತ ಸಂಖ್ಯೆಯಲ್ಲಿ ಕಾರ್ಮಿಕರನ್ನು ಒದಗಿಸಲು ವಿಫಲವಾದಾಗ ಕಡಿಮೆ ಕಾರ್ಮಿಕರಿಗೆ ಅನುಗುಣವಾಗಿ ಗುತ್ತಿಗೆದಾರರಿಗೆ ದಂಡ ಹಾಕಲಾಗುವುದು ಮತ್ತು ಅಂತಹ ಸಂದರ್ಭದಲ್ಲಿ ಬೇರೆಯವರಿಂದ ಕೆಲಸ ನಿರ್ವಹಿಸಿದಾಗ, ಖರ್ಚಾದ ಮೊತ್ತವನ್ನು ದಂಡದ ಮೊತ್ತದೊಂದಿಗೆ ವಸೂಲಿ ಮಾಡಲಾಗುವುದು. ಒಂದು ವೇಳೆ ತುಂಡು ಗುತ್ತಿಗೆ ಕೆಲಸದ ಪರಿಮಾಣ ನಮೂದಿಸಿದಿಕ್ಕಿಂತ ಕಡಿಮೆ ಆದಲ್ಲಿ ಕಡಿಮೆ ಮ್ಯಾನ್ ಪವರ್ ನಿಯೋಜಿಸಲು ವ್ಯವಸ್ಥಾಪಕ ನಿರ್ದೇಶಕರು ಅನುಮತಿ ನೀಡಬಹುದಾಗಿದ್ದು ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಉ) ಒಕ್ಕೂಟಕ್ಕೆ ಹಾನಿಯುಂಟು ಮಾಡಿದಾಗ, ಸೋರುವಿಕೆಯಾದಾಗ, ತೂಕ ವ್ಯತ್ಯಾಸವಿರುವ ಹಾಲಿನ ಚೀಲಕ್ಕೆ, ದಿನಾಂಕವಿಲ್ಲದ ಹಾಲಿನ ಚೀಲಕ್ಕೆ, ಹಾಳಾದ ಕೆಲಸಗಳಿಗಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ವ್ಯವಸ್ಥಾಪಕ ನಿರ್ದೇಶಕರು ವಿಧಿಸಿದ ದಂಡಗಳನ್ನು ಸಂದಾಯ ಮಾಡದೇ ಇರುವಂತಹ ಮೊತ್ತವನ್ನು,

ಊ) ಕಾರ್ಮಿಕರಿಗೆ ಸಂಬಂಧಿಸಿದಂತೆ ಭವಿಷ್ಯನಿಧಿ, ಇ.ಎಸ್.ಐ., ಮುಂತಾದ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಪಾವತಿಸದಿದ್ದಲ್ಲಿ ಅಂತಹ ಮೊಬಲಗನ್ನು ಮತ್ತು ಅಂತಹ ಸಂಸ್ಥೆಗಳು ಕಾರ್ಮಿಕ ಗುತ್ತಿಗೆಗೆ ಸಂಬಂಧಿಸಿದಂತೆ ವಿಧಿಸುವ ಯಾವುದೇ ದಂಡದ ಮೊತ್ತವನ್ನು,

ಋ) ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಎ) ಗುತ್ತಿಗೆದಾರರು ಕಾನೂನುಬದ್ಧವಾಗಿ ಸಲ್ಲಿಸಬೇಕಾದ ರಿಟರ್ನ್ಸ್‌ಗಳನ್ನು ಹಾಗೂ ದಾಖಲೆಗಳನ್ನು ಪಿ.ಎಫ್, ಇ.ಎಸ್.ಐ ಮತ್ತು ಸರಕು ಮತ್ತು ಸೇವಾ ತೆರಿಗೆ (GST) ಇಲಾಖೆಗಳಿಂದ ಪರಿವೀಕ್ಷಣೆಗೆ ಒಳಪಡಿಸಿ ಅದರ ದಾಖಲೆಗಳನ್ನು ವಾರ್ಷಿಕ ಅವಧಿ ಮುಗಿದ 01 ತಿಂಗಳೊಳಗಾಗಿ ಅಥವಾ ಗುತ್ತಿಗೆ ಅವಧಿ ಮುಗಿದ ಒಂದು ತಿಂಗಳ ಅವಧಿ ಒಳಗಾಗಿ ಸಲ್ಲಿಸಬೇಕು. ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿ ಅದರ ದೃಢೀಕೃತ ಮತ್ತು ಪರಿವೀಕ್ಷಣಾ ಪ್ರತಿಗಳನ್ನು ಒಕ್ಕೂಟಕ್ಕೆ ಸಲ್ಲಿಸಿದ ನಂತರವೇ ಭದ್ರತಾ ಠೇವಣಿಯನ್ನು ವಾಪಸ್ಸು ಮಾಡಲಾಗುವುದು.

(9) <u>ಕೆಲಸದ ಅವಧಿ:</u>

ಈ ಕೆಳಕಂಡಂತೆ ಪಾಳಿಯಲ್ಲಿ ಗುತ್ತಿಗೆ ಕಾರ್ಮಿಕರನ್ನು ಒದಗಿಸಬೇಕಾಗಿರುತ್ತದೆ. ಅಗತ್ಯವಾದಾಗ ಪಾಳಿಯ ವೇಳೆ ಬದಲಾಗಬಹುದು.

ಎ) ಒಂದನೇ ಪಾಳಿ ಬೆಳಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆಯವರೆಗೆ

ಬಿ) ಸಾಮಾನ್ಯ ಪಾಳಿ ಬೆಳಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ

ಸಿ) 2 ನೇ ಪಾಳಿ ಮಧ್ಯಾಹ್ನ 2 ರಿಂದ ರಾತ್ರಿ 10 ಗಂಟೆಯವರೆಗೆ

ಡಿ) 3 ನೇ ಪಾಳಿ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯವರೆಗೆ

ಇ) ಡೇರಿಗಳಲ್ಲಿ ಕೆಲಸಗಳನ್ನು "ಸ್ಪ್ಲಿಟ್ ಹವರ್" ನಲ್ಲಿ ಕಾಯನಿರ್ವಹಿಸಬೇಕಾಗಬಹುದಾಗಿರುತ್ತದೆ.

ಈ) ಪಾಳಿಯ ವೇಳೆಯು ಒಕ್ಕೂಟದ ವಿಭಾಗಗಳಿಗೆ ಸಂಬಂದಿಸಿದಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಎಫ್) ದಿನಕ್ಕೆ 08 ತಾಸು ಮಾತ್ರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸುವುದು.

ಜಿ) ಮಹಿಳಾ ಕಾರ್ಮಿಕರನ್ನು ರಾತ್ರಿ ಪಾಳಿಯ ಕೆಲಸಗಳಿಗೆ ನಿಯೋಜಿಸಕೂಡದು.

(10) ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದ್ದಲ್ಲಿ ಸಂಭಾವನೆಯನ್ನು ಅನುಪಾತದಲ್ಲಿ ಕಠಾವಣೆ ಮಾಡಲಾಗುವುದು ಹಾಗೂ ದಂಡ ವಿಧಿಸಲಾಗುವುದು ಮತ್ತು ಅದಕ್ಕೆ ಒಕ್ಕೂಟ ಪರ್ಯಾಯ ವ್ಯವಸ್ಥೆ ಮಾಡಿದಲ್ಲಿ ಅದರ ಹೆಚ್ಚುವರಿ ಮೊಬಲಗಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

(11) ಗುತ್ತಿಗೆದಾರರು ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸುವಂತಿಲ್ಲ. ಸಬ್‌ಲೆಟ್ ಮಾಡಲು ಅವಕಾಶ ಇರುವುದಿಲ್ಲ.

(12) ಗುತ್ತಿಗೆದಾರ ಅಥವಾ ಅವರ ಪ್ರತಿನಿಧಿ ಸದಾ ಕೆಲಸದ ಸ್ಥಳದಲ್ಲಿದ್ದು, ಆಯಾ ವಿಭಾಗದ ಅಧಿಕಾರಿಯ ನಿರ್ದೇಶನದ ಮೇರೆಗೆ ಕಾರ್ಮಿಕರಿಂದ ಕೆಲಸ ನಿರ್ವಹಿಸಬೇಕು. ತಪ್ಪಿದಲ್ಲಿ ದಂಡನೆಯ ಕ್ರಮ ಜರುಗಿಸಲಾಗುವುದು.

(13) ಗುತ್ತಿಗೆದಾರನು ತನ್ನ ಕೆಲಸದ ನಿರ್ವಹಣೆ ಮಾಡಲು ವಿಫಲವಾದಲ್ಲಿ ಮತ್ತು ಒಕ್ಕೂಟದ ಕೆಲಸಗಳಿಗೆ ಧಕ್ಕೆ ಉಂಟು ಮಾಡಿದಲ್ಲಿ ಒಕ್ಕೂಟದ ಹಿತದೃಷ್ಟಿಯಿಂದ ಅವಶ್ಯ ಕಂಡು ಬಂದಲ್ಲಿ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಪೂರ್ವದಲ್ಲಿ ಒಪ್ಪಂದವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಥವಾ ನಿಗದಿತ ದಿನಾಂಕದಿಂದ ಜಾರಿಗೆ ಬರುವಂತೆ ಯಾವುದೇ ಪೂರ್ವಭಾವಿ ನೋಟೀಸನ್ನು ಗುತ್ತಿಗೆದಾರರಿಗೆ ನೀಡದೆ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ ಮತ್ತು ಈ ರೀತಿಯ ಸಂದರ್ಭದಲ್ಲಿ ಗುತ್ತಿಗೆದಾರರು ಯಾವುದೇ ನಷ್ಟವನ್ನು / ಪರಿಹಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದಿಂದ ಕೇಳುವಂತಿಲ್ಲ.

(14) ಗುತ್ತಿಗೆ ಕೆಲಸದ ರೀತಿ ಮತ್ತು ಸಂಭವನೀಯ ದುಷ್ಪರಿಣಾಮಗಳಿಗನುಗುಣವಾಗಿ ರಕ್ಷಣಾ ಸಲಕರಣೆಗಳನ್ನು ಗುತ್ತಿಗೆದಾರನು ತಮ್ಮ ಕೆಲಸಗಾರರಿಗೆ ತನ್ನ ಸ್ವಂತ ವೆಚ್ಚದಲ್ಲಿ ಒದಗಿಸತಕ್ಕದ್ದು.

(15) ಅನ್ವಯಿಸುವ ಕಾಯ್ದೆಗಳು:

ಕಾರ್ಮಿಕ ಗುತ್ತಿಗೆದಾರರು ಈ ಕೆಳಕಂಡ ಕಾಯ್ದೆಗಳ ಹಾಗೂ ಕಾಲಕಾಲಕ್ಕೆ ಜಾರಿಯಲ್ಲಿರುವ ತಿದ್ದುಪಡಿ ಕಾಯ್ದೆಗಳ ಅನುಸಾರ ನಡೆದುಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಅ) ಕಾಂಟ್ರಾಕ್ಟ್ ಲೇಬರ್ (ರೆಗ್ಯೂಲೇಶನ್ ಅಂಡ್ ಅಬಾಲಿಷನ್) ಆಕ್ಟ್

ಆ) ಪೇಮೆಂಟ್ ಆಫ್ ವೇಜಸ್ ಆಕ್ಟ್

ಇ) ಇ.ಪಿ.ಎಫ್. ಆಕ್ಟ್

ಈ) ವರ್ಕ್‌ಮನ್ ಕಾಂಪನ್‌ಷೇಷನ್ ಆಕ್ಟ್

ಉ) ಇನ್‌ಕಂ ಟ್ಯಾಕ್ಸ್ ಆಕ್ಟ್

ಊ) ಇ.ಎಸ್.ಐ. ಆಕ್ಟ್

ಋ) ಪ್ರೊಫೆಷನಲ್ ಟ್ಯಾಕ್ಸ್ ಆಕ್ಟ್

ೠ) ಸರಕು ಮತ್ತು ಸೇವಾ ತೆರಿಗೆ ಆಕ್ಟ್

ಎ) ಬೋನಸ್ ಆಕ್ಟ್

ಏ) ಗ್ರಾಚ್ಯೂಯಿಟಿ ಆಕ್ಟ್

ಐ) ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಹಾಗೂ ಕಾರ್ಮಿಕ ಗುತ್ತಿಗೆಗೆ ಅನ್ವಯಿಸುವ ಸರ್ಕಾರದ ಇತರೆ ಯಾವುದೇ ಕಾನೂನುಗಳು / ನಿಬಂಧನೆಗಳು.

ಒ) ಈ ಬಗ್ಗೆ ಕಾಲಕಾಲಕ್ಕೆ ನ್ಯಾಯಾಲಯಗಳು ನೀಡುವ ಆದೇಶಗಳನ್ನು ಪಾಲಿಸುವುದು.

(16) 18 ವರ್ಷ ವಯೋಮಿತಿಯೊಳಗಿನ ಮತ್ತು ಗರಿಷ್ಟ 40 ವರ್ಷ ಮೇಲ್ಪಟ್ಟ ವಯೋಮಿತಿಯ ಕಾರ್ಮಿಕರನ್ನು ನೇಮಿಸಿಕೊಳ್ಳಕೂಡದು.

(17) ಕಾರ್ಮಿಕರಿಗೆ ನೇಮಕಾತಿ ಆದೇಶ ಹಾಗೂ ಗುರುತಿನ ಚೀಟಿಯನ್ನು ನೀಡುವುದು, ಕಾರ್ಮಿಕರ ನೇಮಕಾತಿ ಆದೇಶದ ಪ್ರತಿಯನ್ನು ಒಕ್ಕೂಟಕ್ಕೆ ನೀಡುವುದು.

(18) ಕೆಲಸದ ಸಮಯದಲ್ಲಿ ಯಾವುದೇ ಕಾರಣದಿಂದಾಗಿ ಉಂಟಾದ ತಾತ್ಕಾಲಿಕ / ಖಾಯಂ ಊನಗಳು ಅಥವಾ ಸಾವು ಉಂಟಾದಲ್ಲಿ ಅದಕ್ಕೆ ಕಾನೂನಿನ ರೀತ್ಯ ತತ್ಸಂಬಂಧ ಯಾವುದೇ ಪರಿಹಾರವನ್ನು ನೀಡುವುದು ಗುತ್ತಿಗೆದಾರರ ಜವಾಬ್ದಾರಿ ಆಗಿರುತ್ತದೆ.

(19) ಶಾಸನಬದ್ಧ ನಿಬಂಧನೆಗಳಿಗನುಸಾರವಾಗಿ ಗುತ್ತಿಗೆದಾರನು ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

(20) ಗುತ್ತಿಗೆಯನ್ನು ಯಾವುದೇ ಸಂದರ್ಭದಲ್ಲಿ ಬೇರೆಯವರಿಗೆ ವರ್ಗಾಯಿಸುವಂತೆ ಸಲ್ಲಿಸುವ ಯಾವುದೇ ಮನವಿಯನ್ನು ಸದರಿ ಗುತ್ತಿಗೆದಾರರು ಕಾರ್ಯ ನಿರ್ವಹಿಸಲು ಅಸಮರ್ಥರೆಂದು ಪರಿಗಣಿಸಲಾಗುವುದು. ಗುತ್ತಿಗೆಯ ನಿಬಂಧನೆಗಳನ್ನು ಮುರಿದಿದ್ದಾರೆಂದು ಪರಿಗಣಿಸಿ, ಗುತ್ತಿಗೆಯನ್ನು ರದ್ದುಗೊಳಿಸಲಾಗುವುದಲ್ಲದೇ ಅವರ ಠೇವಣಿಯೊಂದಿಗೆ ಅವರಿಂದ ಬಾಕಿ ಇರಬಹುದಾದ ಇನ್ನಾವುದೇ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

(21) ವಿವಾದಗಳು:–

ಎ) ಯಾವುದೇ ಕೆಲಸ ಕಾರ್ಯಗಳ ತೃಪ್ತಿಕರ ನಿರ್ವಹಣೆಗೆ ಸಂಬಂಧಿಸಿದಂತೆ ಮತ್ತು ನಿಬಂಧನೆಗಳ ಪಾಲನೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟರವರ ತೀರ್ಮಾನವೇ ಅಂತಿಮವಾದದ್ದು ಮತ್ತು ಪರಿಗಣಿತವಾದದ್ದು.

ಬಿ) ಈ ಗುತ್ತಿಗೆದಾರಿಕೆಯಿಂದ ಉದ್ಭವಿಸುವ ಯಾವುದೇ ವ್ಯಾಜ್ಯಗಳು ಮಧ್ಯಸ್ಥದಾರರ ಮುಖಾಂತರ ಬಗೆಹರಿಸಿಕೊಳ್ಳತಕ್ಕದ್ದು. ಮಧ್ಯಸ್ಥದಾರರನ್ನು ವ್ಯವಸ್ಥಾಪಕ ನಿರ್ದೇಶಕರು ನೇಮಕ ಮಾಡುವರು. ವ್ಯಾಜ್ಯಗಳು ಅಲ್ಲಿಯೂ ಬಗೆಹರಿಯದ ಪಕ್ಷದಲ್ಲಿ ನೀವು ಒಕ್ಕೂಟದಲ್ಲಿ ನಾಮಮಾತ್ರ ಸದಸ್ಯರಾಗಿರುವುದರಿಂದ ಸಹಕಾರ ಸಂಘಗಳ ನ್ಯಾಯಾಲಯದಲ್ಲಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದು. ವ್ಯಾಜ್ಯಗಳು ಅಲ್ಲಿಯೂ ಬಗೆಹರಿಯದ ಪಕ್ಷದಲ್ಲಿ ನ್ಯಾಯಾಲಯದ ಮೊರೆ ಹೋಗಬಹುದಾಗಿದ್ದು, ಆದಾಗ್ಯೂ ಈ ವಿವಾದಗಳು ಶಿವಮೊಗ್ಗ ನಗರದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

**(22)** ಗುತ್ತಿಗೆದಾರನು ಟೆಂಡರಿನಲ್ಲಿ ನೀಡಿದ ವಿಳಾಸಕ್ಕೆ ದೃಢೀಕೃತ ಅಂಚೆ/ಕೋರಿಯರ್ಸ್ ಮೂಲಕ ಕಳುಹಿಸಿರುವ ಕಾಗದಗಳು ತಲುಪದೇ ಇದ್ದಲ್ಲಿ ಅದಕ್ಕೆ ಒಕ್ಕೂಟವು ಜವಾಬ್ದಾರಿ ಹೊಂದಿರುವುದಿಲ್ಲ. ಕಾಗದ ಪತ್ರಗಳು ಮೇಲ್ಕಂಡಂತೆ ಒಕ್ಕೂಟದಿಂದ ರವಾನೆಯಾದ ನಂತರ ಎಲ್ಲಾ ತಿಳುವಳಿಕೆಗಳು ಕಾಂಟ್ರಾಕ್ಟ್‌ದಾರನಿಂದ ಪಡೆಯಲ್ಪಟ್ಟಿದೆ ಎಂದು ತೀರ್ಮಾನಿಸಲಾಗುವುದು.

**(23)** <u>ಹಣ ಪಾವತಿ / ಬಿಲ್ ಪಾವತಿ:</u>

ಎ) ಗುತ್ತಿಗೆದಾರನು ಕಾರ್ಮಿಕರನ್ನು ಒದಗಿಸಿದ್ದಕ್ಕೆ ಅನುಗುಣವಾಗಿ ತಿಂಗಳಿಗೊಂದು ಬಾರಿ ಬಿಲ್‌ಗಳನ್ನು ಹಾಗೂ ಕಾರ್ಮಿಕರ ಹಾಜರಾತಿಗಳನ್ನು ದ್ವಿಪ್ರತಿಯಲ್ಲಿ ತಯಾರಿಸಿ ಗುತ್ತಿಗೆದಾರರು ಕಾರ್ಮಿಕರನ್ನು ಒದಗಿಸಿದ ಬಗ್ಗೆ ಹಾಗೂ ಅವರು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದ ಬಗ್ಗೆ ಸಂಬಂಧಪಟ್ಟ ವಿಭಾಗಾಧಿಕಾರಿಗಳಿಂದ ದೃಢೀಕರಣ ಪಡೆದು ಆಯಾ ತಿಂಗಳ 02 ನೇ ತಾರೀಖಿನೊಳಗಾಗಿ ಬಿಲ್‌ಗಳನ್ನು ಕಚೇರಿಗೆ ಹಣ ಪಾವತಿಗೆ ಸಲ್ಲಿಸತಕ್ಕದ್ದು. ನಂತರ 05 ದಿನಗಳೊಳಗಾಗಿ ಕಚೇರಿಯಿಂದ ಹಣ ಪಾವತಿಸಲಾಗುವುದು. ಗುತ್ತಿಗೆದಾರರು ಕಾರ್ಮಿಕರಿಗೆ ಬ್ಯಾಂಕ್ ಮುಖಾಂತರ ವೇಜ್ ಪಾವತಿಸತಕ್ಕದ್ದು. ಕಾರ್ಮಿಕರಿಗೆ ವೇಜ್ ಪಾವತಿಸಿರುವುದಕ್ಕೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ಮುಂದಿನ ತಿಂಗಳ ಗುತ್ತಿಗೆ ಬಿಲ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

ಬಿ) ಪ್ರತಿ ತಿಂಗಳು ಕಾರ್ಮಿಕರಿಗೆ ಭವಿಷ್ಯ ನಿಧಿ, ಇ.ಎಸ್.ಐ, ಇ.ಎಲ್, ಜಿ.ಹೆಚ್ ಮತ್ತು ಬೋನಸ್ ಅನ್ನು ಗುತ್ತಿಗೆದಾರರು ಪಾವತಿಸಿದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ದೃಢೀಕೃತ ಷೆಡ್ಯೂಲ್‌ನೊಂದಿಗೆ ಒಕ್ಕೂಟಕ್ಕೆ ಮುಂದಿನ ತಿಂಗಳ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಸಿ) ಗುತ್ತಿಗೆದಾರರು ಪ್ರತಿ ತಿಂಗಳು ಬಿಲ್‌ನೊ0ದಿಗೆ ಸಲ್ಲಿಸುವ ಸರಕು ಮತ್ತು ಸೇವಾ ತೆರಿಗೆ (GST) ಅನ್ನು ನಿಗದಿತ ಸಮಯದೊಳಗೆ ಸಂಬಂಧಿಸಿದ ಇಲಾಖೆಗೆ ಪಾವತಿಸಿ ದೃಢೀಕೃತ ಚಲನ್ ಅನ್ನು ಮುಂದಿನ ತಿಂಗಳ ಬಿಲ್‌ನೊಂದಿಗೆ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸುವುದು.

ಡಿ) ಗುತ್ತಿಗೆದಾರರು ಮಾಸಿಕ ಬಿಲ್ ಅವಧಿ ಮುಗಿದ ಕೂಡಲೇ ನಿಯಮಾವಳಿ ಪ್ರಕಾರ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಇ.ಎಸ್.ಐ. ಮತ್ತು ಪಿ.ಎಫ್. ಮುಂತಾದ ಶಾಸನಬದ್ಧ ವಂತಿಕೆಗಳನ್ನು ಆಯಾ ಇಲಾಖೆಗಳಿಗೆ ತುಂಡು ಗುತ್ತಿಗೆಯ ಮಾಸಿಕ ಬಿಲ್ಲಿನ ಮೊತ್ತದ ಮೇಲೆ ಸಂಬಂಧಪಟ್ಟ ಇಲಾಖೆಗಳು ನಿಗದಿಪಡಿಸಿರುವ ಶೇಕಡವಾರು ಮೊತ್ತವನ್ನು ನಿಗದಿತ ಅವಧಿಯೊಳಗೆ ಪಾವತಿಸುವುದು. ತಪ್ಪಿದಲ್ಲಿ ಮುಂದಿನ ತಿಂಗಳ ಗುತ್ತಿಗೆದಾರರ ಬಿಲ್‌ನಲ್ಲಿ ಯಾವುದೇ ಮುನ್ಸೂಚನೆ ನೀಡದೆ ಮೇಲ್ಕಾಣಿಸಿದ ರೀತ್ಯಾ ಪಾವತಿಸಬೇಕಾದ ಒಟ್ಟು ಹಣವನ್ನು ಕಠಾವಣೆ ಮಾಡಿಕೊಂಡು ಪಿ.ಎಫ್. ಇ.ಎಸ್.ಐ. ಸಂಸ್ಥೆಗಳಿಗೆ ಒಕ್ಕೂಟದಿಂದಲೇ ಗುತ್ತಿಗೆದಾರರ ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು. ಅಂತಹ ಸಂದರ್ಭದಲ್ಲಿ ದಂಡ ಹಾಗೂ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರ ಬಿಲ್‌ನಲ್ಲಿ / ಭದ್ರತಾ ಠೇವಣಿಯಲ್ಲಿ ಕಠಾವಣೆ ಮಾಡಿಕೊಳ್ಳುವ ಅಧಿಕಾರವನ್ನು ಒಕ್ಕೂಟ ಹೊಂದಿರುತ್ತದೆ.

ಇ) ಗುತ್ತಿಗೆದಾರರು ಆಯಾ ತಿಂಗಳುಗಳಲ್ಲಿ ಎಲ್ಲಾ ತುಂಡು ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಇ.ಎಸ್.ಐ. ಮತ್ತು ಪಿ.ಎಫ್. ವಂತಿಗೆ ಪಾವತಿಸತಕ್ಕದ್ದು ತಪ್ಪಿದಲ್ಲಿ ಒಕ್ಕೂಟವು / ಇಲಾಖೆಯು ದಂಡ ವಿಧಿಸುವುದು ಸೇರಿದಂತೆ ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಗುತ್ತಿಗೆದಾರರು ಬದ್ಧರಾಗಿರುತ್ತಾರೆ.

ಎಫ್) ಗುತ್ತಿಗೆದಾರರು ಅಂತಿಮ ತಿಂಗಳ ಕಾರ್ಮಿಕರ ವೇತನವನ್ನು ವೇತನದ ಅವಧಿ ಮುಗಿದ 10 ದಿನಗಳ ಒಳಗಾಗಿ ಕಾರ್ಮಿಕರಿಗೆ ಹಾಗೂ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಿ, ಸದರಿ ದಾಖಲೆಗಳನ್ನು ಒಕ್ಕೂಟಕ್ಕೆ 15 ದಿನಗಳೊಳಗಾಗಿ ಒದಗಿಸುವುದು. ನಂತರ ಅಂತಿಮ ತಿಂಗಳ ಬಿಲ್ ಪಾವತಿಸಲು ಪರಿಗಣಿಸಲಾಗುವುದು. ಒಂದು ವೇಳೆ ಅವಧಿ ಮುಗಿದ 15 ದಿನಗಳೊಳಗಾಗಿ ದಾಖಲಾತಿಗಳನ್ನು ಒದಗಿಸದಿದ್ದರೆ ಸದರಿ ಮೊತ್ತವನ್ನು ಒಕ್ಕೂಟದಿಂದ ಪಾವತಿಸಿ ಆ ಮೊಬಲಗನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ / ಭದ್ರತಾ ಠೇವಣಿಯಲ್ಲಿ ಕಠಾವಣೆ ಮಾಡಿಕೊಳ್ಳಲಾಗುವುದು.

ಜಿ) ಗುತ್ತಿಗೆದಾರರಿಗೆ ಒಕ್ಕೂಟದಿಂದ ಹಣ ಪಾವತಿ ಮಾಡುವಾಗ ಸರ್ಕಾರಿ ಕಾಯಿದೆಗಳನ್ವಯ ತೆರಿಗೆ ಮತ್ತು ಇತರೆ ಬಾಬ್ತುಗಳನ್ನು ಕಠಾವಣೆ ಮಾಡಿ ಹಣ ಪಾವತಿ ಮಾಡಲಾಗುವುದು.

ಹೆಚ್) ಗುತ್ತಿಗೆದಾರರು ಟೆಂಡರ್ ದಾಖಲೆಗಳಲ್ಲಿ ಮತ್ತು ಗುತ್ತಿಗೆ ಕಾರ್ಮಿಕರ ಶಾಸನಬದ್ಧ ಪಾವತಿಗೆ ಸಂಬಂಧಿಸಿದಂತೆ ಒದಗಿಸಿದ ದಾಖಲೆಗಳಲ್ಲಿ ಹಾಗೂ ನಂತರ ಒಕ್ಕೂಟಕ್ಕೆ ಸಲ್ಲಿಸುವ ಯಾವುದೇ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅದನ್ನು ತೀವ್ರವಾಗಿ ಪರಿಗಣಿಸಿ ದಂಡ ವಿಧಿಸಲಾಗುವುದು ಹಾಗೂ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವುದೂ ಸೇರಿದಂತೆ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

**(24)** ಕೆಲಸದ ಅವಧಿಯಲ್ಲಿ ಗುತ್ತಿಗೆ ಕಾರ್ಮಿಕರು ಎಲ್ಲಾ ಬಗೆಯ ಸುರಕ್ಷಣಾ ನಿಯಮಗಳನ್ನು ಪಾಲಿಸಿ, ಕೆಲಸ ಮಾಡುವಂತೆ ಸಂಬಂಧಪಟ್ಟ ಗುತ್ತಿಗೆದಾರರು ಎಚ್ಚರಿಕೆ ವಹಿಸಿ, ಕ್ರಮಕೈಗೊಳ್ಳಬೇಕು. ಗುತ್ತಿಗೆದಾರನ ಕಾರ್ಮಿಕರು ಕೆಲಸದ ಮೇಲಿರುವಾಗ ಬೀಡಿ, ಸಿಗರೇಟು, ತಂಬಾಕು, ನಶ್ಯ, ಮದ್ಯಪಾನ ಹಾಗೂ ಇನ್ನಿತರೆ ಮಾದಕ ಮತ್ತು ನಿಷಿದ್ಧ ಪದಾರ್ಥಗಳ ಸೇವನೆ ಮಾಡಕೂಡದು. ವಿಶೇಷವಾಗಿ ವೈಯಕ್ತಿಕ ಶುಚಿತ್ವದ ಕಡೆ, ಹೇರ್‌ಕಟ್ ಮತ್ತು ನೇಲ್‌ಕಟ್‌ಗಳಿಗೆ ಗಮನ ನೀಡತಕ್ಕದ್ದು, ಅವನು ಆರೋಗ್ಯವಂತನಾಗಿದ್ದು, ಚರ್ಮ ಮುಂತಾದ ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಮುಕ್ತನಾಗಿರತಕ್ಕದ್ದು. ಒಕ್ಕೂಟದ ನಿಯಮಗಳನ್ನು ಪಾಲಿಸತಕ್ಕದ್ದು ಹಾಗೂ ಶಾಂತಿಪಾಲನೆಗೆ ಭಂಗ ಉಂಟು ಮಾಡುವ ಯಾವುದೇ ಕೆಲಸವನ್ನು ಮಾಡಕೂಡದು.

**(25)** ಗುತ್ತಿಗೆದಾರರು ತಮ್ಮ ಕಾರ್ಮಿಕ ಸಿಬ್ಬಂದಿಗಳಿಗೆ ಡ್ರೆಸ್ ಕೋಡ್ ಅನ್ನು ಜಾರಿಯಲ್ಲಿ ತರುವುದು ಹಾಗೂ ಡೀಫ್ರೀಜ್‌ಗಳಲ್ಲಿ ಕೆಲಸ ಮಾಡುವ ಗುತ್ತಿಗೆದಾರ ಕಾರ್ಮಿಕರಿಗೆ ಗುತ್ತಿಗೆದಾರರು ತಮ್ಮ ಖರ್ಚಿನಲ್ಲಿ ಗಮ್ ಬೂಟ್‌ಗಳನ್ನು, ಉಲ್ಲನ್ ಕೋಟ್‌ಗಳನ್ನು, ಹ್ಯಾಂಡ್ ಗ್ಲೌಸ್ ಹಾಗೂ ಕ್ಯಾಪ್‌ಗಳನ್ನು ಒದಗಿಸತಕ್ಕದ್ದು. ತಪ್ಪಿದಲ್ಲಿ ಅವುಗಳನ್ನು ಒಕ್ಕೂಟದಿಂದ ಒದಗಿಸಿ ಅದರ ಮೊಬಲಗನ್ನು ಗುತ್ತಿಗೆ ಬಿಲ್‌ನಲ್ಲಿ ಕಟಾಯಿಸಿಕೊಳ್ಳಲಾಗುವುದು.

**(26)** ಕಾರ್ಮಿಕ ಗುತ್ತಿಗೆದಾರನು ತನ್ನ ಗುತ್ತಿಗೆ ಕಾರ್ಮಿಕರು ಪ್ರತಿ ಪಾಳಿಯಲ್ಲಿ ಪ್ರತಿ ವಿಭಾಗದಲ್ಲಿ ಕೆಲಸ ಪ್ರಾರಂಭವಾಗುವ 15 ನಿಮಿಷ ಪೂರ್ವದಲ್ಲಿ ಹಾಜರಿರುವಂತೆ ಕಡ್ಡಾಯವಾಗಿ ನೋಡಿಕೊಳ್ಳತಕ್ಕದ್ದು.

**(27)** ಗುತ್ತಿಗೆದಾರನು ಪ್ರತಿದಿನದ ಪಾಳಿಯ ಅವಧಿ ಪೂರ್ವದಲ್ಲಿ ನಿಗದಿತ ಸಂಖ್ಯೆಯಷ್ಟು ಮಾತ್ರ ಕೆಲಸಗಾರರನ್ನು ಗುರುತಿಸಿ ಡೇರಿಯ ಒಳಗೆ ಬಿಡುವುದು. ಮಹಿಳಾ ಕಾರ್ಮಿಕರೂ ಸೇರಿದಂತೆ ಕೆಲಸಗಾರರನ್ನು ಕೆಲಸದ ವೇಳೆಯಲ್ಲಿ ಅಥವಾ ಕೆಲಸದ ಜಾಗದಿಂದ ಹೊರಗೆ ಹೋಗುವಾಗ ಅವರನ್ನು ದೈಹಿಕವಾಗಿ ತಪಾಸಣೆ ಮಾಡುವ ಅಧಿಕಾರವನ್ನು ಒಕ್ಕೂಟದ ಅಧಿಕಾರಿಗಳು ಅಥವಾ ಭದ್ರತಾ ವಿಭಾಗದವರು ಹೊಂದಿರುತ್ತಾರೆ.

**(28)** ಗುತ್ತಿಗೆ ಕೆಲಸಗಾರರು ತಮಗೆ ನಿರ್ಧಿಷ್ಟ ಪಡಿಸಿದ ಜಾಗ / ವೇಳೆಯನ್ನು ಬಿಟ್ಟು ಹೊರಗಡೆ ಅಲೆದಾಡದಂತೆ ಗಾಳಿ ವರ್ತಮಾನ ಸುಳ್ಳು ವದಂತಿಗಳನ್ನು ಹಬ್ಬಿಸದಂತೆ ಗುಂಪುಗಾರಿಕೆ ಕೆಲಸಗಳನ್ನು ಮಾಡದಂತೆ ಕಾಂಟ್ರಾಕ್ಟ್‌ದಾರನು ತನ್ನ ಕೆಲಸಗಾರರಿಗೆ ಮುನ್ನೆಚ್ಚರಿಕೆ ನೀಡಬೇಕು ಮತ್ತು ಅದರಂತೆ ನಿರ್ವಹಿಸುವ ಜವಾಬ್ದಾರಿ ಗುತ್ತಿಗೆದಾರನದ್ದಾಗಿರುತ್ತದೆ.

**(29)** ಗುತ್ತಿಗೆದಾರನು ಗುತ್ತಿಗೆ ಲೇಬರ್ (ರೆಗ್ಯೂಲೇಷನ್ ಮತ್ತು ಅಬಾಲಿಷನ್) ಕಾಯಿದೆ ಪ್ರಕಾರ ಸೂಕ್ತ ಅಧಿಕಾರಿಯವರಿಂದ ಗುತ್ತಿಗೆ ಮಂಜೂರಾತಿ ಆದೇಶ ಹೊರಡಿಸಿದ 1 ತಿಂಗಳ ಒಳಗಾಗಿ ಲೈಸೆನ್ಸ್ ಪಡೆಯಬೇಕು. ಇದರ ದೃಢೀಕೃತ ಪ್ರತಿಯನ್ನು ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಗುತ್ತಿಗೆ ಆದೇಶವನ್ನು ರದ್ದುಪಡಿಸಲಾಗುವುದು ಹಾಗೂ ಸದರಿ ಕಾಯಿದೆ ಪ್ರಕಾರ ಅಗತ್ಯ ರಿಜಿಸ್ಟರ್ ಹಾಗೂ ದಾಖಲೆಗಳನ್ನು ಇಡುವುದು ಮತ್ತು ಅವುಗಳನ್ನು ತಪಾಸಣೆಯ ಸಮಯದಲ್ಲಿ ಹಾಜರುಪಡಿಸುವುದು.

**(30)** ಗುತ್ತಿಗೆದಾರರು ಕಾಲಕಾಲಕ್ಕೆ ಜಾರಿಯಲ್ಲಿರುವ ಸರಕು ಮತ್ತು ಸೇವಾ ತೆರಿಗೆ(GST) ಅನ್ನು ಸರ್ಕಾರಕ್ಕೆ ಪಾವತಿಸಬೇಕು. ಪಾವತಿಸಿದ ಬಗ್ಗೆ ಸೂಕ್ತ ದಾಖಲೆಗಳನ್ನು ಒದಗಿಸುವುದು.

**(31)** ಒಕ್ಕೂಟವು ಗುತ್ತಿಗೆ ಕಾರ್ಮಿಕರೊಂದಿಗೆ ಯಾವುದೇ ಮಾಲೀಕ ಮತ್ತು ಸೇವಕನ ಸಂಬಂಧ ಹೊಂದಿರುವುದಿಲ್ಲ. ಗುತ್ತಿಗೆದಾರನಿಗೆ ನೀಡಿದ ಆದೇಶದ ಪ್ರಕಾರ ಸೂಚಿಸಿರುವ ಸಂಖ್ಯೆಯ ಗುತ್ತಿಗೆ ಕಾರ್ಮಿಕರನ್ನು ನೇಮಿಸಿ ಕೆಲಸವನ್ನು ನಿರ್ವಹಿಸಬೇಕು. ಕೆಲಸಕ್ಕೆ ನಿಗದಿಪಡಿಸಿದ ಎಲ್ಲಾ ಕಾರ್ಮಿಕರನ್ನು ಪಿ.ಎಫ್., ಇ.ಎಸ್.ಐ, ಜಿ.ಹೆಚ್, ಇ.ಎಲ್, ಬೋನಸ್ ಮುಂತಾದ ಎಲ್ಲಾ ಶಾಸನಬದ್ಧ ಕಾಯ್ದೆಯಡಿಯಲ್ಲಿ ತರುವುದು ಮತ್ತು ಸದರಿ ಸೌಲಭ್ಯಗಳನ್ನು ಅವರಿಗೆ ಲಭ್ಯ ಮಾಡುವುದು. ಪ್ರತಿ ತಿಂಗಳು ಬಿಲ್ಲಿನ ಜೊತೆಗೆ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ಪಾವತಿಗಳನ್ನು ಪಾವತಿ ಮಾಡಿದ ದಾಖಲೆಗಳನ್ನು ಒದಗಿಸುವುದು. ತಪ್ಪಿದಲ್ಲಿ ಬಿಲ್ಲುಗಳನ್ನು ಹಣ ಪಾವತಿಗೆ ಪರಿಗಣಿಸಲಾಗುವುದಿಲ್ಲ.

**(32)** ಗುತ್ತಿಗೆ ಕಾರ್ಮಿಕರಿಗೆ ಒಕ್ಕೂಟದಲ್ಲಿ ಲಭ್ಯವಿದ್ದ, ಉಪಹಾರ ಗೃಹದಿಂದ ಒಕ್ಕೂಟವು ನಿಗದಿಪಡಿಸುವ ದರದಲ್ಲಿ ಊಟ, ಕಾಫಿ, ಟೀ, ಸೌಲಭ್ಯ ಒದಗಿಸಲಾಗುವುದು.

**(33)** ಗುತ್ತಿಗೆ ಕಾರ್ಮಿಕರು ಯಾವುದೇ ನೌಕರರ ಸಂಘ, ಟ್ರೇಡ್ ಯೂನಿಯನ್ ಚಟುವಟಿಕೆಯಲ್ಲಿ ಭಾಗವಹಿಸಕೂಡದು.

**(34)** ಒಕ್ಕೂಟದಲ್ಲಿ ಹಾಲಿನ ಸಂಸ್ಕರಣೆ ಮತ್ತು ಹಾಲಿನ ಉತ್ಪನ್ನಗಳನ್ನು ತಯಾರಿಸಲು ನೇಮಿಸುವ ಗುತ್ತಿಗೆ ನೌಕರರಿಗೆ ಪ್ರಾರಂಭದಲ್ಲಿ ಹಾಗೂ ನಂತರ ಕನಿಷ್ಟ ಆರು ತಿಂಗಳಿಗೊಂದಾವರ್ತಿ ಗುತ್ತಿಗೆದಾರರು ತಮ್ಮ ಖರ್ಚಿನಲ್ಲಿ ವೈದ್ಯಕೀಯ ಪರಿಶೀಲನೆಗೊಳಪಡಿಸಬೇಕಾಗಿರುತ್ತದೆ ಹಾಗೂ ಡೇರಿಯಲ್ಲಿ ಕೆಲಸ ಮಾಡಲು ವೈದ್ಯಕೀಯವಾಗಿ ಅರ್ಹರಿರುವವರನ್ನು ಮಾತ್ರ ಕೆಲಸದಲ್ಲಿ ತೊಡಗಿಸುವುದು.

(35) ಕಾರ್ಮಿಕ ಗುತ್ತಿಗೆದಾರರು ಕೆಲಸಗಾರರನ್ನು ಒದಗಿಸಿರುವ ದಾಖಲೆಗಳನ್ನು, ರಿಜಿಸ್ಟರ್‌ಗಳನ್ನು ನಿರ್ವಹಣೆ ಮಾಡತಕ್ಕದ್ದು ಮತ್ತು ಒಕ್ಕೂಟದ ಅಧಿಕಾರಿಗಳಿಗೆ ಸಂಬಂಧಿಸಿದ ಸರ್ಕಾರಿ ಇಲಾಖೆ ಅಧಿಕಾರಿಗಳಿಗೆ ತಪಾಸಣೆ ವೇಳೆಯಲ್ಲಿ ಅದನ್ನು ಹಾಜರುಪಡಿಸತಕ್ಕದ್ದು.

(36) ಗುತ್ತಿಗೆದಾರನು / ಗುತ್ತಿಗೆದಾರನಿಂದ ನೇಮಿಸಲ್ಪಟ್ಟ ಕಾರ್ಮಿಕನು ನಿಗದಿಪಡಿಸಿದ ಕೆಲಸವನ್ನು ನಿರ್ವಹಿಸದಿದ್ದ ಪಕ್ಷದಲ್ಲಿ ಅಥವಾ ಅವನಿಂದ ಒಕ್ಕೂಟಕ್ಕೆ ಹಾನಿ / ನಷ್ಟ ಉಂಟಾದಲ್ಲಿ ಅಥವಾ ಗುತ್ತಿಗೆದಾರನು ಗುತ್ತಿಗೆಯ ಯಾವುದೇ ಆದೇಶ ಹಾಗೂ ಕರಾರು ಒಪ್ಪಂದಗಳನ್ನು ಉಲ್ಲಂಘನೆ ಮಾಡಿದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಸೂಕ್ತ ದಂಡವನ್ನು ವಿಧಿಸುವ ಹಕ್ಕನ್ನು ಹೊಂದಿರುತ್ತಾರೆ.

ಕರಾರು ಒಪ್ಪಂದದ ಪ್ರಕಾರ ಕೆಲಸ ನಿರ್ವಹಿಸಲು ಗುತ್ತಿಗೆದಾರನು ಮೇಲಿಂದ ಮೇಲೆ ವಿಫಲವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಮತ್ತು ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಯಲ್ಲಿ ಇರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಇದಕ್ಕೆ ಗುತ್ತಿಗೆದಾರನು ಬದ್ಧನಾಗಿರುತ್ತಾನೆ. ಗುತ್ತಿಗೆದಾರನು ವಹಿಸಿದ ಕೆಲಸ ನಿರ್ವಹಿಸದೇ ಇದ್ದಲ್ಲಿ ಅದನ್ನು ಬೇರೆಯವರಿಂದ ಒಕ್ಕೂಟ ಮಾಡಿಸಿಕೊಳ್ಳಬಹುದಾಗಿದೆ. ಈ ವೆಚ್ಚವನ್ನು ಭರಿಸುವ ಜವಾಬ್ದಾರಿ ಗುತ್ತಿಗೆದಾರನದ್ದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಧಿಸುವ ದಂಡವನ್ನು ಅವರ ಮಾಸಿಕ ಬಿಲ್ / ಭದ್ರತಾ ಠೇವಣಿಯಲ್ಲಿ ಕಠಾಯಿಸಿಕೊಳ್ಳಲಾಗುವುದು.

(37) ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರಿಗೆ ಕಾಲಕಾಲಕ್ಕೆ ಸರ್ಕಾರವು ಜಾರಿಯಲ್ಲಿ ತರುವ ಕನಿಷ್ಟ ವೇತನಕ್ಕಿಂತ ಕಡಿಮೆ ಇಲ್ಲದಂತೆ ವೇಜ್ ಪೀರಿಯಡ್ ಮುಗಿದ 10 ದಿನಗಳೊಳಗಾಗಿ ವೇತನ ಪಾವತಿಸತಕ್ಕದ್ದು.

(38) ಕಾರ್ಮಿಕರಿಗೆ ಕಾಯ್ದೆ ಅಡಿ ವಾರಕ್ಕೆ ಒಂದು ದಿನ ಪೇಡ್ ವೀಕ್ಲಿ ಆಫ್ ನೀಡಬೇಕಾಗಿರುತ್ತದೆ. ಗುತ್ತಿಗೆದಾರರು ಕಾರ್ಮಿಕರಿಗೆ ವೀಕ್ಲಿ ಆಫ್ ಸೇರಿದಂತೆ ಮಾಸಿಕ ಕನಿಷ್ಟ ವೇತನವನ್ನು ಪಾವತಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಯಶಸ್ವಿ ಟೆಂಡರ್‌ದಾರರು ಪ್ರಸ್ತುತ ಟೆಂಡರ್‌ನಲ್ಲಿ ನಮೂದಿಸುವ ದರವು ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸುವ ಕನಿಷ್ಟ ವೇತನ + ವಿ.ಡಿ.ಎ ಮೊತ್ತಕ್ಕಿಂತ ಕಡಿಮೆಯಾದಲ್ಲಿ ವ್ಯತ್ಯಾಸದ ಶಾಸನಬದ್ಧ ಮೊತ್ತವನ್ನು ಮಾತ್ರ ಗುತ್ತಿಗೆದಾರರಿಗೆ ಪಾವತಿಗೆ ಪರಿಗಣಿಸಲಾಗುವುದು.

(39) ಗುತ್ತಿಗೆದಾರರು ಕಾಲಕಾಲಕ್ಕೆ ಸರ್ಕಾರವು ಜಾರಿಗೆ ತರುವ ವಿ.ಡಿ.ಎ. ದರದಂತೆ ಕನಿಷ್ಟ ವೇತನವನ್ನು ಲೆಕ್ಕ ಹಾಕಿ ಕಾರ್ಮಿಕರಿಗೆ ಹಾಗೂ ಪಿ.ಎಫ್, ಇ.ಎಸ್.ಐ. ವಂತಿಕೆಯನ್ನು ಆಯಾ ಸಂಸ್ಥೆಗಳಿಗೆ ಜಮಾ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

(40) ಪೋಲೀಸ್ ಇಲಾಖೆಯಲ್ಲಿ ಕ್ರಿಮಿನಲ್ ರೆಕಾರ್ಡ್ ಹೊಂದಿದ ಅಥವಾ ಒಕ್ಕೂಟದಿಂದ ಹಿಂದೆ ಯಾವುದೇ ಕಾರಣಗಳಿಗಾಗಿ ವಜಾ ಮಾಡಲ್ಪಟ್ಟ ಕಾರ್ಮಿಕರನ್ನು / ಮಾಜಿ ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆ ಕಾರ್ಮಿಕರನ್ನಾಗಿ ಕೆಲಸಕ್ಕೆ ನಿಯೋಜಿಸಿಕೊಳ್ಳುವಂತಿಲ್ಲ.

(41) ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಿಕೊಂಡಿರುವ ಬಗ್ಗೆ ಅವರ ಫೋಟೋದೊಂದಿಗಿನ ಬಯೋಡೇಟಾ ಮತ್ತು ನೇಮಕಾತಿ ಆದೇಶದ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸಬೇಕಾಗುತ್ತದೆ.

## (42) ಕಮರ್ಷಿಯಲ್ ಟೆಂಡರ್‌ನಲ್ಲಿ ದರ ನಮೂದಿಸುವ ಬಗ್ಗೆ.

ಕರ್ನಾಟಕ ಸರ್ಕಾರವು ದಿನಾ0ಕ: 01–04–2017 ರಿ0ದ ಪ್ರೊಕ್ಯೂರ್‌ಮೆ0ಟ್, ಪ್ರೋಸೆಸಿ0ಗ್ ಅ0ಡ್ ಡಿಸ್ಟ್ರಿಬ್ಯೂಷನ್ ಆಫ್ ಮಿಲ್ಕ್ ಉದ್ದಿಮೆ0ಯಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಕನಿಷ್ಟ ವೇತನ ಮತ್ತು ವಿ.ಡಿ.ಎ ನಿಗದಿಪಡಿಸಿದ್ದು, ಅದಕ್ಕೆ ಶಾಸನಬದ್ಧ ಪಾವತಿಗಳನ್ನು ಸೇರಿಸಿದ ವಿವರ ಈ ಕೆಳಕ0ಡ0ತೆ ಇರುತ್ತದೆ.

| ವಲಯ–3 | |
|---|---|
| ವಿವರ | ಕುಶಲರಲ್ಲದ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಸೇರಿ) |
| Basic | 9100.00 |
| DA | 1275.60 |
| Total (Basic+DA) | 10375.60 |
| With Off reliever | 1729.27 |
| Total | 12104.87 |
| PF (Basic+DA+Wo*13.15%) | 1591.79 |
| ESI (Basic+DA+Wo+GH*4.75%) | 590.95 |
| EL (Basic+DA+Wo/30*18.25/12) | 613.65 |
| GH (Basic+DA+Wo/30*10/12) | 336.25 |
| Bonus (Basic+DA+Wo*8.33%) | 1008.34 |
| Grand Total | 16245.84 |

ಸದರಿ ಟೆ0ಡರ್‌ನಲ್ಲಿ ನಮೂದಿಸಿರುವ ಎ ಮತ್ತು ಬಿ ತು0ಡು ಗುತ್ತಿಗೆ ಕೆಲಸಗಳಿಗೆ ಮೇಲ್ಕ0ಡ0ತೆ ವಲಯ–3 ರಲ್ಲಿ ಕುಶಲರಲ್ಲದ ಕಾರ್ಮಿಕರಿಗೆ (ಆಫ್ ರಿಲೀವರ್ ಸೇರಿ) ನಿಗದಿಪಡಿಸಿರುವ ದರ

ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಟ ವೇತನ ಮತ್ತು ಎಲ್ಲಾ ಶಾಸನಬದ್ಧ ಪಾವತಿಗಳನ್ನೊಳಗೊ0ಡ0ತೆ ಟೆ0ಡರ್‌ನಲ್ಲಿ ನಮೂದಿಸಿರುವ ಕೆಲಸಗಳ ಪ್ರಮಾಣ ಹಾಗೂ ಕಾರ್ಮಿಕರ ಸ0ಖ್ಯೆಗಳನ್ನು ಪರಿಗಣಿಸಿ ಮೇಲ್ಕ0ಡ ದರಪಟ್ಟಿ ಅನ್ವಯ ಮಾತ್ರ ದರ ನಮೂದಿಸುವುದು. ಸ0ಬ0ಧಿಸಿದ0ತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾ0ಕ: 21–03–2017 ರ ಸುತ್ತೋಲೆಯಲ್ಲಿ ತಿಳಿಸಿರುವ0ತೆ ಇ–ಪ್ರೊಕ್ಯೂರ್‌ಮೆ0ಟ್ ಪೋರ್ಟಲ್‌ನಲ್ಲಿ ಮಾತ್ರ ಗುತ್ತಿಗೆದಾರರು ದರ ನಮೂದಿಸತಕ್ಕದ್ದು. ಬದಲಿಗೆ ಟೆ0ಡರ್ ಅನುಬ0ಧಗಳು, ನಮೂನೆಗಳು ಹಾಗೂ ಇತರೆ ಯಾವುದೇ ಮಾಧ್ಯಮದ ಮೂಲಕ ನಮೂದಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆದಾರರು ಮೇಲ್ಕ0ಡ ಎ ಮತ್ತು ಬಿ ತು0ಡು ಗುತ್ತಿಗೆ ಕೆಲಸಗಳಿಗೆ ಪ್ರತ್ಯೇಕವಾಗಿ ದರಗಳನ್ನು ನಮೂದಿಸತಕ್ಕದ್ದು. ಆಯಾ ತು0ಡು ಗುತ್ತಿಗೆ ಕೆಲಸಕ್ಕೆ ನಮೂದಿಸಿದ ಟೆ0ಡರ್ ದರಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು. ಶೂನ್ಯ ಸರ್ವೀಸ್ ಚಾರ್ಜ್ ನಮೂದಿಸುವ ಟೆ0ಡರ್‌ದಾರರ ಟೆ0ಡರ್‌ಗಳನ್ನು ತಿರಸ್ಕರಿಸಲಾಗುವುದು. ಏಕ ರೂಪದ ಸರ್ವೀಸ್ ಚಾರ್ಜ್ ಅನ್ನು ನಮೂದಿಸಿರುವ ಟೆ0ಡರ್‌ದಾರರನ್ನು ಆಯ್ಕೆ ಮಾಡುವ ಸ0ದರ್ಭದಲ್ಲಿ ಅವರ ಕಾರ್ಯಕ್ಷಮತೆ, ತೃಪ್ತಿದಾಯಕ ಸೇವೆ ಮತ್ತು ಅನುಭವದ ಆಧಾರದ ಮೇಲೆ ಪರಿಗಣಿಸಲಾಗುವುದು.

(ಸರಕು ಮತ್ತು ಸೇವಾ ತೆರಿಗೆ ಅನ್ನು ಒಕ್ಕೂಟದಿಂದ ಪಾವತಿಸಲಾಗುವುದು. ಆದ್ದರಿಂದ ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ ಕಮರ್ಷಿಯಲ್ ಟೆಂಡರ್‌ನಲ್ಲಿ ದರ ನಮೂದಿಸುವುದು.)

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಗುತ್ತಿಗೆ ಕೆಲಸಕ್ಕೆ ಸಂಬಂಧಿಸಿದಂತೆ ಈ ಮೇಲೆ ತಿಳಿಸಿದ ಎಲ್ಲಾ ನಿಬಂಧನೆಗಳನ್ನು ಓದಿ ಒಪ್ಪಿರುತ್ತೇನೆ.

ಟೆಂಡರ್‌ದಾರರ ಸಹಿ

ದಿನಾಂಕ: (ಟೆಂಡರ್‌ದಾರರ ಹೆಸರು ಮತ್ತು ವಿಳಾಸ)

(ಟಿಪ್ಪಣಿ: ಮೇಲ್ಕಂಡ ನಿಬಂಧನೆಗಳನ್ನು ಒಪ್ಪಿಕೊಂಡಿರುವುದಕ್ಕೆ ಟೆಂಡರ್‌ದಾರರು ಸಹಿ ಮಾಡಿ ಇದನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು)

**ಅನುಬಂಧ – ' ಡಿ'**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222**

---

## –: *ತುಂಡು ಗುತ್ತಿಗೆಯಲ್ಲಿ ನಿರ್ವಹಿಸಬೇಕಾದ ಕೆಲಸಗಳು* :–

**[ನಮೂದಿಸಿದ ಕಾರ್ಮಿಕ ಸಂಖ್ಯೆಯು ಆ ಕೆಲಸಗಳಿಗೆ ದಿನಕ್ಕೆ ಕನಿಷ್ಟ ಒದಗಿಸಬೇಕಾದ ಕಾರ್ಮಿಕ ಸಂಖ್ಯೆ ಆಗಿದ್ದು, ದಿನದ ಎಲ್ಲಾ ಪಾಳಿಗಳಿಗೂ ಸೇರಿದಂತೆ ಇರುತ್ತದೆ.]**

**A) ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು:**

**(ಒದಗಿಸಬೇಕಾದ ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ:– 60 ಅದರಲ್ಲಿ ಕನಿಷ್ಟ 45 ಜನ ಪುರುಷ ಕಾರ್ಮಿಕರು ಕಡ್ಡಾಯವಾಗಿ ಇರತಕ್ಕದ್ದು)**

- ➢ ಉಗ್ರಾಣದಿಂದ ಅಗತ್ಯವಾದ ವಿವಿಧ ಮಾದರಿ ಫಿಲ್ಮ್, ಕ್ರೇಟ್‌ಗಳನ್ನೂ ಪ್ಯಾಕಿಂಗ್ ವಿಭಾಗಕ್ಕೆ ತರುವುದು. ಅನುಪಯುಕ್ತ ಕ್ರೇಟ್‌ಗಳನ್ನು ಎರಡು ಭಾಗಗಳಾಗಿ ತುಂಡು ಮಾಡುವುದು ಮತ್ತು ಉಗ್ರಾಣಕ್ಕೆ ಹಿಂದಿರುಗಿಸುವುದು. ವೇಸ್ಟ್ ಫಿಲ್ಮ್‌ನ್ನು ವೇಸ್ಟ್ ಫಿಲ್ಮ್‌ಯಾರ್ಡ್‌ಗೆ ಸಾಗಿಸುವುದು.
- ➢ ವಿತರಣೆ ಮಾರ್ಗದಿಂದ ಬಂದ ಎಲ್ಲಾ ಖಾಲಿ ಕ್ರೇಟುಗಳನ್ನು ಕಡ್ಡಾಯವಾಗಿ ನೀರಿನ ತೊಟ್ಟಿಯಲ್ಲಿ ಹಾಕಿ ನಂತರ ಕ್ರೇಟ್ ವಾಷರ್‌ನಲ್ಲಿ ಶುಚಿಗೊಳಿಸುವುದು, ಹಾಗೂ ತುಂಬಾ ಕೊಳೆಯಾದ ಕ್ರೇಟ್‌ಗಳನ್ನು ಕೈಗಳಿಂದ ಶುಚಿತ್ವಗೊಳಿಸುವುದು ಮತ್ತು ಪ್ಯಾಕಿಂಗ್ ವಿಭಾಗಕ್ಕೆ ಸಾಗಿಸುವುದು.
- ➢ ಸ್ವಯಂಚಾಲಿತ ಯಂತ್ರಗಳಿಂದ ಬರುವ ವಿವಿಧ ಮಾದರಿಯ (200 ಮಿ.ಲಿ, 250 ಮಿ.ಲಿ, 500 ಮಿ.ಲಿ ಮತ್ತು 1000 ಮಿ.ಲಿ) ಹಾಲಿನ ಚೀಲಗಳನ್ನು ತೊಳೆದಿರುವ ಕ್ರೇಟುಗಳಲ್ಲಿ ಪ್ರತ್ಯೇಕವಾಗಿ ತುಂಬುವುದು. ಲೀಕಾದ / ಅಸಾಧಾರಣ ತೂಕದ ಹಾಗೂ ದಿನಾಂಕ ಮುದ್ರಣವಿಲ್ಲದ ಚೀಲಗಳನ್ನು ಬೇರ್ಪಡಿಸುವುದು. ಮಾರುಕಟ್ಟೆಯಲ್ಲಿ ತೂಕ ವ್ಯತ್ಯಾಸವಿರುವ / ಕೋಡಿಂಗ್‌ರಹಿತ ಇರುವ ಹಾಲಿನ/ಮೊಸರಿನ ಪ್ಯಾಕೇಟ್ ದೊರೆತಲ್ಲಿ ರೂ. 5000/– ದಂಡ ವಿಧಿಸಲಾಗುವುದು ಹಾಗೂ ನಷ್ಟ/ಕಾನೂನು ಕ್ರಮಗಳಿಂದ ಧಕ್ಕೆಯಾಗುವ ಬಾಬ್ತಿನ ಮೊಬಲಗನ್ನು ವಸೂಲಾತಿಗೆ ಕ್ರಮವಿಡಲಾಗುವುದು.
- ➢ ಹಾಲು ಪ್ಯಾಕ್ ಮಾಡುವ ಸ್ವಯಂಚಾಲಿತ ಯಂತ್ರದ ಪ್ರತಿಯೊಂದು **"ಹೆಡ್"** ಗೂ ಒಬ್ಬ ಕಾರ್ಮಿಕರನ್ನು ನಿಯೋಜಿಸುವುದು.
- ➢ ಅನುಪಯುಕ್ತ ಹಾಲಿನ ಚೀಲಗಳನ್ನು ಬೇರ್ಪಡಿಸಿ, ಹಾಲನ್ನು ಪ್ರತ್ಯೇಕಿಸಿ ಪ್ರೋಸೆಸ್ಸಿಂಗ್ ವಿಭಾಗಕ್ಕೆ ಹಾಲನ್ನು ರವಾನಿಸುವುದು. ಹಾಗೂ ವೇಸ್ಟ್ ಫಿಲ್ಮ್‌ನ್ನು ನೀರಿನಲ್ಲಿ ತೊಳೆದು ವೇಸ್ಟ್ ಫಿಲ್ಮಂ ಯಾರ್ಡ್ ಸ್ಥಳಕ್ಕೆ ಆಗಿಂದಾಗಲೇ ಸಾಗಿಸುವುದು.
- ➢ ಶೀಥಲೀಕರಣ ಕೊಠಡಿಯಲ್ಲಿ ತುಂಬಿದ ಹಾಲಿನ ಕ್ರೇಟುಗಳನ್ನು ಜೋಡಿಸುವುದು.

  ಪ್ಯಾಕಿಂಗ್ ವಿಭಾಗದ ಫಿಲಂ ಇಟ್ಟಿರುವ ಕೊಠಡಿ, ಶೀಥಲೀಕರಣ ಕೊಠಡಿ, ಪ್ಯಾಕಿಂಗ್ ವಿಭಾಗ ಶೀಥಲೀಕರಣ ಕೊಠಡಿಯ ಸ್ವಯಂಚಾಲಿತ ಯಂತ್ರಗಳು, ಕ್ರೇಟ್‌ವಾಷರ್, ಕ್ರೇಟ್‌ವಾಷರ್ ಫಿಲ್ಟರ್‌ಗಳನ್ನು ಮತ್ತು ಸದರಿ ವಿಭಾಗಕ್ಕೆ ಸಂಬಂಧಿಸಿದ ಇತರೇ ಯಂತ್ರಗಳ ಸ್ವಚ್ಛತೆಯನ್ನು ನಿರ್ವಹಿಸುವುದು ಮತ್ತು ಕ್ರೇಟ್ ತೊಳೆಯುವ ಯಂತ್ರದ ಸುತ್ತಲ ಜಾಗ ಸ್ವಚ್ಛಗೊಳಿಸುವುದು.

- ಸದರಿ ಕೆಲಸಕ್ಕೆ ಸಂಬಂಧಿಸಿದಂತೆ ಎಲ್ಲಾ ಪಾಳಿಗಳಲ್ಲಿ ಕೆಲಸ ನಿರ್ವಹಿಸುವುದು. ಪ್ರತಿ ಕಾರ್ಮಿಕನು ದಿನದಲ್ಲಿ 8 ಘಂಟೆಗಿಂತ ಹೆಚ್ಚಿನ ಅವಧಿಯ ಕೆಲಸ ನಿರ್ವಹಿಸದಂತೆ ನೋಡಿಕೊಳ್ಳತಕ್ಕದ್ದು.
- ವಿಭಾಗದಲ್ಲಿ ಕೆಲಸದ ಅನುಭವ ಪಡೆದ ಕಾರ್ಮಿಕರನ್ನು ದೈನಂದಿನ ಕೆಲಸಕ್ಕೆ ನಿಯೋಜಿಸುವುದು. ಪದೇಪದೇ ಕಾರ್ಮಿಕರನ್ನು ಬದಲಾಯಿಸಬಾರದು. ಅನಿವಾರ್ಯ ಸಂದರ್ಭದಲ್ಲಿ ಕಾರ್ಮಿಕರನ್ನು ಬದಲಾಯಿಸಿದಲ್ಲಿ ವಿಭಾಗಕ್ಕೆ ಮಾಹಿತಿ ನೀಡುವುದು.
- ಪಾಳಿಯ ಆರಂಭಕ್ಕೆ ಮುನ್ನ 15 ನಿಮಿಷಗಳು ಮುಂಚಿತವಾಗಿ ಕಾರ್ಮಿಕರು ವಿಭಾಗಕ್ಕೆ ಹಾಜರಾಗಿ ವೈಯಕ್ತಿಕ ಸ್ವಚ್ಛತೆಯೊಂದಿಗೆ ಹಾಗೂ ಕೆಲಸದ ಸಮವಸ್ತ್ರಗಳೊಂದಿಗೆ ಹಾಜರಾಗುವುದು.
- ಸದರಿ ವಿಭಾಗಕ್ಕೆ ಸಂಬಂಧಪಟ್ಟಂತೆ ವಿಭಾಗದಲ್ಲಿ ಪೂರ್ಣ ಸ್ವಚ್ಛತೆ ಮಾಡುವುದು. (ಒಳಗೆ ಹಾಗೂ ಹೊರಗೆ)
- ಕ್ರೇಟ್‌ಗಳಲ್ಲಿ ಹಾಲಿನ ಚೀಲಗಳನ್ನು ಡ್ಯಾಮೇಜ್ ಆಗದಂತೆ ಸಮರ್ಪಕವಾಗಿ ಜೋಡಿಸುವುದು. ಕ್ರೇಟ್‌ಗಳ ಜೋಡಣೆಯ ವ್ಯತ್ಯಾಸದಿಂದ ಅಥವಾ ಹಾಲಿನ ಚೀಲಗಳನ್ನು ಕ್ರೇಟ್‌ಗಳಲ್ಲಿ ಸಮರ್ಪಕವಾಗಿ ಜೋಡಿಸದೇ ಇರುವುದರಿಂದ ಹಾಲು/ಮೊಸರಿನ ಪೊಟ್ಟಣಗಳು ಡ್ಯಾಮೇಜ್ ಆದಲ್ಲಿ ದಂಡ ವಿಧಿಸಲು ಅವಕಾಶವಿರುತ್ತದೆ.
- ಪಾಳಿಯ ಅಧಿಕಾರಿಗಳು ಸೂಚಿಸುವ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು.

**B) <u>ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಡ್ಯಾಮೇಜ್ ಪ್ಯಾಕೇಟ್‌ಗಳನ್ನು ಸಾರ್ಟಿಂಗ್ ಮಾಡುವ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು:</u> (ಒದಗಿಸಬೇಕಾದ ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ: ಶಿವಮೊಗ್ಗ ಡೇರಿ–14 ದಾವಣಗೆರೆ ಡೇರಿ–08)**

- ರಾತ್ರಿಪಾಳಿ ಕೆಲಸಕ್ಕೆ ನಿಯೋಜಿತ ಗುತ್ತಿಗೆ ಕಾರ್ಮಿಕರು ನಿಗದಿತ ವೇಳೆಗೆ ಭದ್ರತಾ ವಿಭಾಗದಲ್ಲಿ ತಮ್ಮ ಹಾಜರಾತಿ ವೇಳೆಯನ್ನು ದಾಖಲಿಸಿ ಎಫ್.ಜಿ.ಎಸ್ ವಿಭಾಗದಲ್ಲಿಯೂ ಸಹ ಹಾಜರಾತಿಯನ್ನು ದಾಖಲಿಸುವುದು.
- ಹಾಲು ವಿತರಣೆಗಾಗಿ ಶೈತ್ಯಾಗಾರದಲ್ಲಿ ದಾಸ್ತಾನು ಇರುವ ಹಾಲಿನ ಪ್ಯಾಕೇಟ್ ತುಂಬಿದ ಕ್ರೇಟ್‌ಗಳನ್ನು ವಿತರಣಾ ಮಾರ್ಗಗಳ ಕೋರಿಕೆಗೆ ಅನುಗುಣವಾಗಿ ಬೆಳಿಗ್ಗೆ, ಸಂಜೆ ಮತ್ತು ರಾತ್ರಿ ವಿತರಣಾ ಮಾರ್ಗದ ವಾಹನಗಳಿಗೆ ಒದಗಿಸುವುದು. ಕ್ರೇಟ್ ಸಾಗಾಣಿಕೆಗೆ ಬಳಸುವ ಕ್ರೇಟ್ ಟ್ರಾಲಿಗಳಿ0ದ ಕ್ರೇಟ್‌ಗಳಿಗೆ ಧಕ್ಕೆ ಉ0ಟಾಗದ0ತೆ ಎಚ್ಚರಿಕೆ ವಹಿಸುವುದು. ತಪ್ಪಿದಲ್ಲಿ ದ0ಡ ವಿಧಿಸಲಾಗುವುದು.
- ವಿತರಣಾ ಮಾರ್ಗದ ವಾಹನಗಳಿಗೆ ನೀಡುವ ಹಾಲಿನ ಕ್ರೇಟ್‌ಗಳಲ್ಲಿ ಬರಬಹುದಾದ ಲೀಕೇಜ್ ಪ್ಯಾಕೇಟ್‌ಗಳನ್ನು ಕೂಡಲೇ ಸಾರ್ಟಿಂಗ್ ಮಾಡಿ ಉತ್ತಮ ಪ್ಯಾಕೇಟ್‌ಗಳನ್ನು ಸ್ವಚ್ಛಗೊಳಿಸಿದ ಕ್ರೇಟ್‌ಗಳಲ್ಲಿ ಜೋಡಿಸಿ ಆಯಾ ವಾಹನಗಳಿಗೆ ಒದಗಿಸುವುದು.
- ಸಾರ್ಟಿಂಗ್‌ನಲ್ಲಿ ಬರುವ ಲೀಕೇಜ್ ಪ್ಯಾಕೇಟ್‌ಗಳನ್ನು ಕತ್ತರಿಸಿ ಬರುವ ಒಟ್ಟು ಹಾಲಿನ ಪ್ರಮಾಣವನ್ನು ಎಫ್.ಜಿ.ಎಸ್ ವಿಭಾಗದಲ್ಲಿ ದಾಖಲಿಸಿ ಸಂಸ್ಕರಣಾ ವಿಭಾಗದ ಮುಖ್ಯಸ್ಥರು ಸೂಚಿಸುವ ಸ್ಥಳಕ್ಕೆ ಸಾಗಿಸುವುದು ಹಾಗೂ ಖಾಲಿ ಪ್ಯಾಕೇಟ್‌ಗಳನ್ನು ಒಟ್ಟುಗೂಡಿಸಿ ನೀರಿನಲ್ಲಿ ತೊಳೆದು ಫಿಲಂ ಯಾರ್ಡ್‌ನಲ್ಲಿ ಹಾಕುವುದು.
- ರಾತ್ರಿಪಾಳಿಯಲ್ಲಿ ಡ್ಯಾಮೇಜ್ ಹಾಲಿನ ಚೀಲಗಳ ಸಾರ್ಟ್‌ಔಟ್ ಪೂರ್ಣಗೊಳಿಸಬೇಕು. ತಪ್ಪಿದಲ್ಲಿ ಪ್ರತಿ ಪ್ರಕರಣಕ್ಕೆ ದಂಡ ಮತ್ತು ನಷ್ಟ ವಸೂಲಾತಿಗೆ ಕ್ರಮಕ್ಕೈಗೊಳ್ಳಲಾಗುವುದು.
- ಹಾಲು ವಿತರಣೆ ಮುಗಿದ ನಂತರದಲ್ಲಿ ಹಾಲು ಶೈತ್ಯಾಗಾರದಲ್ಲಿ ಉಳಿದ ವಿವಿಧ ಮಾದರಿಯ ಹಾಲಿನ ಪ್ಯಾಕೇಟ್‌ಗಳನ್ನು ಸಾರ್ಟಿಂಗ್ ಮಾಡಿ ಸ್ವಚ್ಛಗೊಳಿಸಿದ ಕ್ರೇಟ್‌ಗಳಲ್ಲಿ ಜೋಡಿಸಿ ಪ್ರತ್ಯೇಕವಾಗಿ ಶೈತ್ಯಾಗಾರದಲ್ಲಿ ದಾಸ್ತಾನು ಮಾಡಿ ಎಫ್.ಜಿ.ಎಸ್ ವಿಭಾಗದ ಮುಖ್ಯಸ್ಥರಿಗೆ ಲೆಕ್ಕ ಒಪ್ಪಿಸುವುದು. ವಿವಿಧ ಪ್ರಮಾಣ ಹಾಗೂ ಮಾದರಿಯಿಂದ ತುಂಬಿದ ಹಾಲಿನ ಕ್ರೇಟ್‌ಗಳನ್ನು ವಿಂಗಡಿಸಿ ಇಡುವಲ್ಲಿ ವಿಫಲವಾಗಿ ಲೆಕ್ಕ ವ್ಯತ್ಯಾಸಕ್ಕೆ ಕಾರಣವಾದಲ್ಲಿ ಅದರಿಂದ ಉಂಟಾಗುವ ನಷ್ಟ ಮತ್ತು ದಂಡವನ್ನು ವಿಧಿಸಲಾಗುವುದು.

- ರಾತ್ರಿ ಹಾಲು ವಿತರಣೆ ಮುಗಿದ ನಂತರದಲ್ಲಿ ಹಾಲು ಶೈತ್ಯಾಗಾರ ಹಾಗೂ ಡಾಕ್‌ನ್ನು ಸ್ವಚ್ಛಗೊಳಿಸುವುದು. ಬೆಳಿಗ್ಗೆ ವಿತರಣೆ ನಂತರ ವಿತರಣೆ ಡಾಕ್‌ನ್ನು ಸ್ವಚ್ಛಗೊಳಿಸುವುದು.
- ಹಾಲು ವಿತರಣೆ ಮುಗಿದ ನಂತರದಲ್ಲಿ ಹಾಲಿನ ಕ್ರೇಟ್‌ಗಳನ್ನು ಸಾಗಾಣಿಕೆ ಮಾಡುವ ಟ್ರಾಲಿಗಳನ್ನು ಸ್ವಚ್ಛಗೊಳಿಸಿ ಸೂಚಿತ ಸ್ಥಳದಲ್ಲಿ ಇಡುವುದು.
- ಎಫ್.ಜಿ.ಎಸ್ ಹಾಗೂ ಸಂಸ್ಕರಣಾ ವಿಭಾಗದ ಪಾಳಿಯ ಮುಖ್ಯಸ್ಥರು ಸೂಚಿಸುವ ವಿತರಣೆಗೆ ಸಂಬಂಧಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.

ಸಹಿ/–

ದಿನಾಂಕ: ವ್ಯವಸ್ಥಾಪಕ ನಿರ್ದೇಶಕರು

ಟಿಪ್ಪಣಿ: ಮೇಲ್ಕಂಡ ಕೆಲಸದ ವಿವರಗಳನ್ನು ಒಪ್ಪಿಕೊಂಡಿರುವುದಕ್ಕೆ ಗುತ್ತಿಗೆದಾರರು ಸಹಿ ಮಾಡಿ ಇದನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು.

" ಮೇಲ್ಕಂಡ ಕೆಲಸದ ವಿವರಗಳನ್ನು ಓದಿ ತಿಳಿದುಕೊಂಡು ಒಪ್ಪಿರುತ್ತೇನೆ."

ದಿನಾಂಕ: ಟೆಂಡರ್‌ದಾರರ ಸಹಿ ಮತ್ತು ಸೀಲು

 ಅನುಬಂಧ – ‘ ಇ’

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ–577 222

---

–: ತುಂಡು ಗುತ್ತಿಗೆ ಮೇಲೆ ನಿರ್ವಹಿಸಬೇಕಾದ ಕೆಲಸಗಳು ಈಗಿರುವಂತೆ ಸರಾಸರಿ ಅಂದಾಜು ದಿನವಹಿ ಪ್ರಮಾಣದ ವಿವರಗಳು (ಬದಲಾವಣೆಗೆ ಒಳಪಟ್ಟಿರುತ್ತದೆ) :–

1) ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು:
ಶಿವಮೊಗ್ಗ ಡೇರಿಯಲ್ಲಿ ಹಾಲು ಪ್ಯಾಕಿಂಗ್ ಪ್ರತಿದಿನಕ್ಕೆ ಅಂದಾಜು ಸರಾಸರಿ 1,40,000 ಲೀ.

2) ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಇದಕ್ಕೆ ಸಂಬಂಧಿಸಿದ ಕೆಲಸಗಳು:
ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ವಿತರಣಾ ವಾಹನಗಳಿಗೆ ಪ್ರತಿದಿನ ಸರಬರಾಜು ಮಾಡಬೇಕಾದ ಅಂದಾಜು ಸರಾಸರಿ ಹಾಲಿನ ಒಟ್ಟು ಪ್ರಮಾಣ 1,95,000 ಲೀ.

(ಟಿಪ್ಪಣಿ: ಮೇಲ್ಕಂಡ ಅಂಕಿ ಅಂಶಗಳು ಅಂದಾಜು ಪ್ರಮಾಣದ್ದಾಗಿದ್ದು, ಬದಲಾವಣೆಗೆ ಒಳಪಟ್ಟಿರುತ್ತದೆ. ಆದರೆ ನಿಗದಿತ ಕನಿಷ್ಟ ಕಾರ್ಮಿಕರ ಸಂಖ್ಯೆಯಲ್ಲಿ ಕಡಿತಗೊಳಿಸಲು ಅವಕಾಶವಿರುವುದಿಲ್ಲ. ಪ್ರತಿದಿನ ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿಗಳಿ0ದ ಮಾರುಕಟ್ಟೆಗೆ ರವಾನೆಯಾಗುವ ಹಾಲಿನ ಪ್ರಮಾಣಕ್ಕನುಸಾರವಾಗಿ ಬಿಲ್ ಪಾವತಿಸಲಾಗುವುದು)

ಮೇಲ್ಕಂಡ ವಿವರಗಳನ್ನು ಗಮನಿಸಿದ್ದೇನೆ.

ದಿನಾಂಕ: ಟೆಂಡರ್‌ದಾರರ ಸಹಿ ಹಾಗೂ ಸೀಲ್

**ಅನುಬಂಧ – 'ಎಫ್'**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222**

---

## –: ಕಮರ್ಷಿಯಲ್ ಟೆಂಡರ್ ಭಾಗ–2 :–

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿಗಳಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು**

| | |
|---|---|
| **ಗೆ,** | **ಇಂದ,** |
| **ವ್ಯವಸ್ಥಾಪಕ ನಿರ್ದೇಶಕರು** | **(ಪೂರ್ಣ ಹೆಸರು ಮತ್ತು ಅಂಚೆ ವಿಳಾಸ** |
| **ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ** | **ದೂರವಾಣಿ ಸಂಖ್ಯೆ ನಮೂದಿಸುವುದು)** |
| **ಸಹಕಾರ ಹಾಲು ಒಕ್ಕೂಟ ನಿ.,** | ---------------------- |
| **ಮಾಚೇನಹಳ್ಳಿ, ನಿದಿಗೆ (ಅಂಚೆ),** | ---------------------- |
| **ಶಿವಮೊಗ್ಗ–577 222** | ---------------------- |

**ಮಾನ್ಯರೇ,**

**ಟೆಂಡರ್ ಪ್ರಕಟಣೆ ಸಂಖ್ಯೆ:ಶಿದಾಚಿಸಹಾಒ/ಆಡಳಿತ–4/ತು.ಗು.ಟೆಂ/05/2017-18 ದಿನಾಂಕ: 18-08-2017 ರ ಅನುಸಾರವಾಗಿ ನಾನು ಈ ಟೆಂಡರ್‌ಗೆ ಸಂಬಂಧಿಸಿದಂತೆ ಟೆಕ್ನಿಕಲ್ ಟೆಂಡರ್‌ನಲ್ಲಿರುವ ನಿಯಮ ಹಾಗೂ ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಂಡು ಒಕ್ಕೂಟದ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿಗಳಲ್ಲಿ ತುಂಡು ಗುತ್ತಿಗೆ ಕೆಲಸವನ್ನು 02 ವರ್ಷದ ಅವಧಿಗೆ ನಿರ್ವಹಿಸಲು ಒಪ್ಪಿ ಸರ್ಕಾರವು ಕನಿಷ್ಟ ವೇತನ ಕಾಯ್ದೆ ಪ್ರಕಾರ ನಿಗದಿಪಡಿಸಿದ ವೇತನವನ್ನು ಪರಿಗಣನೆಗೆ ತೆಗೆದುಕೊಂಡು ಈ ಕೆಳಗೆ ತಿಳಿಸಿದಂತೆ ಕನಿಷ್ಟ ದರಗಳನ್ನು ನಮೂದಿಸಿ ಕಮರ್ಷಿಯಲ್ ಟೆಂಡರ್‌ನ್ನು ಸಲ್ಲಿಸುತ್ತಿದ್ದೇನೆ. ಕಮರ್ಷಿಯಲ್ ಟೆಂಡರ್‌ನಲ್ಲಿ ನಮೂದಿಸಿದ ದರಗಳು ಟೆಂಡರ್ ತೆರೆದ 90 ದಿನಗಳವರೆಗೆ ಜಾರಿಯಲ್ಲಿ ಇರುತ್ತವೆ ಎಂದು ಒಪ್ಪಿರುತ್ತೇನೆ. ಟೆಂಡರ್‌ನಲ್ಲಿ ಕೋಟ್ ಮಾಡಿದ ದರಗಳಿಗೆ ನಾನು ಬದ್ಧನಾಗಿರುತ್ತೇನೆ.**

**ದಿನಾಂಕ:** **ಟೆಂಡರ್‌ದಾರರ ಸಹಿ ಮತ್ತು ಸೀಲು.**

***ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಮಾಚೇನಹಳ್ಳಿ, ನಿದಿಗೆ(ಅಂಚೆ) ಶಿವಮೊಗ್ಗ–577 222***

***ತುಂಡು ಗುತ್ತಿಗೆ ಕೆಲಸಗಳಿಗೆ ಸಲ್ಲಿಸಿದ ಕಮರ್ಷಿಯಲ್ ಟೆಂಡರ್***

**ಟೆಕ್ನಿಕಲ್ ಟೆಂಡರ್‌ನಲ್ಲಿಯ ನಿಯಮ ಹಾಗೂ ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಂಡು ಮತ್ತು ವರ್ಗೀಕರಿಸಲಾದ ಕೆಳಕಂಡ ತುಂಡು ಗುತ್ತಿಗೆ ಕೆಲಸಗಳಿಗೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ಕೆಲಸ ಹಾಗೂ ಪರಿಮಾಣಗಳನ್ನು ಅನುಬಂಧ–ಡಿ ಮತ್ತು ಇ ಗಳಲ್ಲಿಯ ನಿಬಂಧನೆಗಳನ್ನು ಗಣನೆಗೆ ತೆಗೆದುಕೊಂಡು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿಗಳಲ್ಲಿ ತುಂಡು ಗುತ್ತಿಗೆ ಕೆಲಸಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆ೦ಟ್ ಪೋರ್ಟಲ್‌ನಲ್ಲಿ ದರವನ್ನು ನಮೂದಿಸಿರುತ್ತೇನೆ.**

| | |
|---|---|
| **A)** | **ಶಿವಮೊಗ್ಗ ಡೇರಿಯಲ್ಲಿ ಹಾಲಿನ ಪ್ಯಾಕೇಟ್‌ಗಳನ್ನು ಕ್ರೇಟ್‌ಗಳಲ್ಲಿ ತುಂಬಿ, ಕೋಲ್ಡ್ ಸ್ಟೋರ್‌ಗೆ ಸಾಗಿಸಿ, ಜೋಡಿಸಿ ಇಡುವ ಹಾಗೂ ಕ್ರೇಟ್ ವಾಷಿಂಗ್ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು:**<br>**(ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಸಂಖ್ಯೆ 60)**<br><br>**<u>ಪ್ರತಿ ಲೀಟರ್ ಹಾಲಿಗೆ ದರ ನಮೂದಿಸುವುದು (ರೂ. ಗಳಲ್ಲಿ)</u>** |
| **B)** | **ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಕೋಲ್ಡ್ ಸ್ಟೋರ್‌ನಿಂದ ಹಾಲಿನ ಕ್ರೇಟ್‌ಗಳನ್ನು ವಿತರಣಾ ವಾಹನಗಳಿಗೆ ಸರಬರಾಜು ಮಾಡುವ ಹಾಗೂ ಡ್ಯಾಮೇಜ್ ಪ್ಯಾಕೇಟ್‌ಗಳನ್ನು ಸಾರ್ಟಿ೦ಗ್ ಮಾಡುವ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು:**<br>**(ಕನಿಷ್ಟ ಅನ್‌ಸ್ಕಿಲ್ಡ್ ಕಾರ್ಮಿಕರ ಒಟ್ಟು ಸಂಖ್ಯೆ 22) (ಶಿವಮೊಗ್ಗ ಡೇರಿಗೆ 14, ದಾವಣಗೆರೆ ಡೇರಿಗೆ 08)**<br><br>**<u>ಪ್ರತಿ ಲೀಟರ್ ಹಾಲಿಗೆ ದರ ನಮೂದಿಸುವುದು (ರೂ. ಗಳಲ್ಲಿ)</u>** |

**ದಿನಾಂಕ:** **ಟೆಂಡರ್‌ದಾರರ ಸಹಿ ಮತ್ತು ಸೀಲು.**

**ಸೂಚನೆ: ಮೇಲ್ಕ೦ಡ ನಮೂನೆಯನ್ನು ಕೇವಲ ಮಾಹಿತಿಗಾಗಿ ನೀಡಲಾಗಿದೆ. ಸ೦ಬ೦ಧಿಸಿದ೦ತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾ೦ಕ: 21–03–2017 ರ ಸುತ್ತೋಲೆಯಲ್ಲಿ ತಿಳಿಸಿರುವ೦ತೆ ಇ–ಪ್ರೊಕ್ಯೂರ್‌ಮೆ೦ಟ್ ಪೋರ್ಟಲ್‌ನಲ್ಲಿ ಗುತ್ತಿಗೆದಾರರು ನಮೂದಿಸುವ ದರಗಳನ್ನು ಪರಿಗಣಿಸಲಾಗುವುದು. ಬದಲಿಗೆ ಟೆ೦ಡರ್ ಅನುಬ೦ಧಗಳು, ನಮೂನೆಗಳು ಹಾಗೂ ಇತರೆ ಯಾವುದೇ ಮಾಧ್ಯಮದ ಮೂಲಕ ನಮೂದಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ.**